ಮಂಗಳೂರು
vishwavani.news
07.01.2019 ಸೋಮವಾರ
ವಿಶ್ವವಾಣಿ







1. ಉದ್ಯಮಿ ದಯಾನಂದ ಸಾಲ್ಯಾನ್ ಬೆಳ್ತಂಗಡಿ, ರಾಜೀವಗಾಂಧಿ ವಿವಿ ಕುಲಪತಿ ಎಸ್. ಸಚ್ಚಿದಾನಂದ್, ಮೂಡುಬಿದರೆ ಎಂಸಿಎಸ್ ಬ್ಯಾಂಕ್ ಸಿಇಒ ಚಂದ್ರಶೇಖರ, ರಾಜೀವಗಾಂಧಿ ವಿವಿ ಕುಲಸಚಿವ ಶಿವಾನಂದ ಕಾಪಶಿ, ಕರ್ಣಾಟಕ ಬ್ಯಾಂಕ್ ಅಧ್ಯಕ್ಷ ಪಿ.ಜಯರಾಮ ಭಟ್, ಚೀಫ್ ಮ್ಯಾನೇಜರ್ ಶ್ರೀನಿವಾಸ ದೇಶಪಾಂಡೆ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಇದ್ದರು. 2. ಆಳ್ವಾಸ್‌ನಲ್ಲಿ ಸುಖವಿಂದರ್ ಸಿಂಗ್ ರಸಸಂಜೆ 3 ವಿರಾಸತ್‌ನಲ್ಲಿ ವಿದ್ಯಾರ್ಥಿಗಳು.

# ವಿರಾಸತ್: ಸುಖವಿಂದರ್ ಸಿಂಗ್ ರಸಧಾರೆ

ವಿಶ್ವವಾಣಿ ಸುದ್ದಿಮನೆ ಮಂಗಳೂರು

ರಣಬೀರ್ ಕಪೂರ್ ಅಭಿನಯದ ಸಂಜು ಸಿನಿಮಾದ ಪ್ರಸಿದ್ಧ ಹಾಡಾದ ಮೈ ಬಾಡಿ ಫಥೆ ಹಾಡುವುದರ ಮೂಲಕ ಆಳ್ವಾಸ್ ವಿರಾಸತ್ ಎರಡನೇ ದಿನದಲ್ಲಿ ಬಾಲಿವುಡ್‌ನ ಖ್ಯಾತ ಗಾಯಕರಾದ ಸುಖ್‌ವಿಂದರ್ ಸಿಂಗ್ ಅವರು ತಮ್ಮ ಸಂಗೀತ ರಸಸಂಜೆಯನ್ನು ಆರಂಭಿಸಿದರು.

ಶಾಸ್ತ್ರೀಯ ಸಂಗೀತ ನಮ್ಮ ತಂದೆ ತಾಯಿಗೆ ಸಮಾನ 'ವಾಸ್ಟ್ ಕೆನೋಟ್ ಬಿ ಚೇಂಜಡ್' ಯೆಂದು ಶಾಸ್ತ್ರೀಯ ಸಂಗೀತದಲ್ಲಿ ತಮಗಿರುವ ಪ್ರೀತಿಯನ್ನು ವ್ಯಕ್ತಪಡಿಸಿದರು. ಹಾಗೆ ರಬ್ನೇ ಬನಾದಿ ಜೋಡಿ ಚಿತ್ರದ ಹೋಲೆ ಹೋಲೆ ಎಂಬ ಹಾಡನ್ನು ಹಾಡಿ ಏಕಕರ ಚಪ್ಪಾಳೆಯ ಸುರಿಮಳೆಗೆ ಪಾತ್ರರಾದರು. ಅವರ ಅತ್ಯುತ್ತಮ ಹಾಡುಗಳಾದ ಛೈಯಾ ಛೈಯಾ, ಆಜ ಆಜ ದಿಲ್ ನಿಚೋಡೆ, ಮರ್ ಜಾವಿ ಕಸ್ಸೆ, ಸಾಬಿ ಸಬಿ, ಬೀಡಿ ಜಲೈ ಲೇ, ನಶೆ ಸಿ ಚಡ್ ಗಯಿ, ಉಡಿ ಉಡಿ ಜಾಯ್, ಆಯ್ಸ್ ಮೇರ ಜಿ ಕರ್ದ, ಗಲ್ಲಾನ್ ಗೂಡಿಯಾನ್, ನಂತಹ ಹಾಡುಗಳನ್ನು ಹಾಡುವುದರ ಮೂಲಕ ಸಂಜೆಯನ್ನು ಸಂಗೀತಮಯಗೊಳಿಸಿದರು.

ರಮ್ತ ಜೋಗಿ ಹಾಡನ್ನು ಹಲವು ವಾದ್ಯಗಳ ಅದ್ಭುತ ಜುಗಲ್ಬಂದಿಯ ಮೂಲಕ ಹಾಡಿ ಎಲ್ಲರ ಮಂದಹಾಸಕ್ಕೆ ಕಾರಣರಾದರು. ಕಾರ್ಯಕ್ರಮಕ್ಕೆ ಆಗಮಿಸಿದ ಮಕ್ಕಳನ್ನು ವೇದಿಕೆಯ ಮೇಲೆ ಕರೆದು 'ಚಕ್ ದೇ ಇಂಡಿಯಾ' ಎಂದು ಅವರು ಹಾಡುವುದಲ್ಲದೆ ಮಕ್ಕಳಿಂದ ಕೂಡ ಹಾಡಿಸಿ ನೆರೆದ ಎಲ್ಲಾ ಮಕ್ಕಳಿಗೆ ಹಾಡಿನ ಮೂಲಕ ಸ್ಫೂರ್ತಿ ನೀಡಿದರು. ತಮ್ಮನ್ನಲ್ಲದೆ ತಮ್ಮ ಎಲ್ಲಾ ವಾದ್ಯಗಾರರಿಗೆ ಸನ್ಮಾನಿಸಿದ್ದು ಆಳ್ವಾಸ್ ಸಂಸ್ಥೆ ಮಾತ್ರ ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದರು.

ಡಾ.ಎಂ. ಮೋಹನ ಆಳ್ವ, ಆನಂದ ಆಳ್ವ, ವಿನಯ್ ಆಳ್ವ ಇದ್ದರು.



ವಿರಾಸತ್ ವೈಭವದಲ್ಲಿ ನೆರೆದ ಜನಸ್ತೋಮ

# ಸೂರ್ಯಪ್ರಕಾಶ್‌ಗೆ ವರ್ಣ ವಿರಾಸತ್ ಪ್ರಶಸ್ತಿ

ವಿಶ್ವವಾಣಿ ಸುದ್ದಿಮನೆ ಮಂಗಳೂರು

ಆಳ್ವಾಸ್ ವಿರಾಸತ್-2019ಕ್ಕೆ ಪೂರಕವಾಗಿ ನಡೆದ ನಾನಾ ರಾಜ್ಯಗಳ ಸಮಕಾಲೀನ ಚಿತ್ರ ಕಲಾವಿದರ ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರ, ಆಳ್ವಾಸ್ ವರ್ಣ ವಿರಾಸತ್ ಭಾನುವಾರ ಸಂಪನ್ನಗೊಂಡಿತು.

ಹೈದರಾಬಾದಿನ ಹಿರಿಯ ಚಿತ್ರ ಕಲಾವಿದ ಸೂರ್ಯ ಪ್ರಕಾಶ್‌ಗೆ 2019ನೇ ಸಾಲಿನ ರಾಷ್ಟ್ರಮಟ್ಟದ ಆಳ್ವಾಸ್ ವರ್ಣ ವಿರಾಸತ್ ಪ್ರಶಸ್ತಿಯನ್ನು ಪುತ್ತಿಗೆ ವಿವೇಕಾನಂದ ನಗರದ ವಿರಾಸತ್ ವೇದಿಕೆಯಲ್ಲಿ ಪ್ರದಾನ ಮಾಡಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಶಂಕರ ಮಹಾದೇವನ್ ಶ್ರೀಗಣೇಶಾಯ ಧೀಮಹಿ ಹಾಡಿನ ಮೂಲಕ ಚಾಲನೆ ನೀಡಿದರು. ಡಾ. ಮೋಹನ್ ಆಳ್ವರಿಗೆ [illegible] ಚಲನಚಿತ್ರದ ಹಾಡು ಅರ್ಪಿಸಿದರು. [illegible] ಬರ್ಮನ್ ಅವರು ಕಲ್ ಹೋ ನಹೋ [illegible]

[illegible]





ಹೈದರಾಬಾದಿನ ಹಿರಿಯ ಚಿತ್ರ ಕಲಾವಿದ ಸೂರ್ಯ ಪ್ರಕಾಶ್ ಅವರಿಗೆ 2019ನೇ ಸಾಲಿನ ರಾಷ್ಟ್ರಮಟ್ಟದ ಆಳ್ವಾಸ್ ವರ್ಣ ವಿರಾಸತ್ ಪ್ರಶಸ್ತಿಯನ್ನು ಪುತ್ತಿಗೆ ವಿವೇಕಾನಂದ ನಗರದ ವಿರಾಸತ್ ವೇದಿಕೆಯಲ್ಲಿ ಸಾಯಂಕಾಲ ಪ್ರದಾನ ಮಾಡಲಾಯಿತು.

ಕನ್ನಡಪ್ರಭ
ಸೋಮವಾರ 7.1.2019

# ಕಲಾವಿದರ ಅಭಿವ್ಯಕ್ತಿಯಿಂದ ಸಮಾಜಕ್ಕೆ ಸತ್ಫಲ

## ಮೂಡುಬಿದಿರೆಯಲ್ಲಿ ಆಳ್ವಾಸ್ ವರ್ಣ, ಶಿಲ್ಪ ವಿರಾಸತ್ ಕಾರ್ಯಕ್ರಮಗಳ ಸಮಾರೋಪದಲ್ಲಿ ಭಟ್ಟಾರಕ ಶ್ರೀ ಅಭಿಮತ

• **ಕನ್ನಡಪ್ರಭ ವಾರ್ತೆ** ಮೂಡುಬಿದಿರೆ

ಕಲಾವಿದರಲ್ಲಿ ಅಭಿವ್ಯಕ್ತಿಯ ಶಕ್ತಿಯಿದೆ. ಸಮಾಜದ ಪ್ರಗತಿಯ ಹಾದಿಯಲ್ಲಿ ಉತ್ತಮ ಅಂಶಗಳ ಸಾರವನ್ನು ಕಲಾವಿದರು ಸ್ವೀಕರಿಸಿ ಸತ್ಫಲಗಳನ್ನು ಪ್ರತಿಫಲವಾಗಿ ಸಮಾಜಕ್ಕೆ ನೀಡುವವರಾಗಬೇಕು ಎಂದು ಜೈನ ಮಠದ ಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಹೇಳಿದ್ದಾರೆ.

ಇಲ್ಲಿನ ವಿದ್ಯಾಗಿರಿಯ ಡಾ.ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ಭಾನುವಾರ ಅಪರಾಹ್ನ ಆಳ್ವಾಸ್ ವಿರಾಸತ್ ಅಂಗವಾಗಿ, ರಾಷ್ಟ್ರೀಯ ಚಿತ್ರಕಲಾವಿದರು ಮತ್ತು ಶಿಲ್ಪ ಕಲಾವಿದರ ಕೂಡುವಿಕೆಯಲ್ಲಿ ನಡೆದ ವರ್ಣ ವಿರಾಸತ್ ಹಾಗೂ ಶಿಲ್ಪ ವಿರಾಸತ್‌ನ ಸಮಾರೋಪ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು.

ನಮ್ಮಲ್ಲಿ ಸಂಕಲ್ಪದ ಜತೆಗೆ ಶ್ರದ್ಧೆ, ಭಕ್ತಿ ಮತ್ತು ಶಕ್ತಿಯಿದ್ದಾಗ ಸಾಧನೆ ಮೂಡಿಬರಲು ಸಾಧ್ಯ ಎಂದ ಅವರು, ಜೀವನ ಶಿಕ್ಷಣ ನೀಡುತ್ತಿರುವ ಆಳ್ವಾಸ್ ದಂತ, ವೈದ್ಯಕೀಯ ಶಿಕ್ಷಣದಲ್ಲೂ ತೊಡಗಿಕೊಂಡು ವಿ.ವಿ. ಮಟ್ಟಕ್ಕೇರುವಂತಾಗಲಿ ಎಂದು ಹಾರೈಸಿದರು.



ಮೂಡುಬಿದಿರೆಯಲ್ಲಿ ನಡೆದ ಆಳ್ವಾಸ್ ವರ್ಣ, ಶಿಲ್ಪ ವಿರಾಸತ್ ಕಾರ್ಯಕ್ರಮಗಳ ಸಮಾರೋಪದಲ್ಲಿ ಭಟ್ಟಾರಕ ಶ್ರೀಗಳು ಮಾತನಾಡುತ್ತಿರುವುದು.

ರಾಜ್ಯ ಕ್ರಾಫ್ಟ್ ಕೌನ್ಸಿಲ್‌ನ ಕಾರ್ಯದರ್ಶಿ ಎಂ.ಎಸ್. ಫಾರೂಕ್ ಮಾತನಾಡಿ ಶಿಲ್ಪ, ವರ್ಣ ಹೀಗೆ ಬಹುಪ್ರಕಾರದ ಕಲಾವಿದರನ್ನು ಶಿಬಿರದ ಮೂಲಕ ಏಕ ವೇದಿಕೆಗೆ ಕರೆತರುವ ಮೂಲಕ ರಾಷ್ಟ್ರಮಟ್ಟದಲ್ಲಿ ಕಲಾವಿದರು ಪ್ರಾಯೋಗಿಕವಾಗಿ ತಮ್ಮ ಅನುಭವ, ಚಿಂತನೆಗಳನ್ನು ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗಿದೆ. ಇತಿಹಾಸವಾಗುತ್ತಿದ್ದ ಸಾಂಪ್ರದಾಯಿಕ ಕಲೆಗಳ ಮೌಲಿಕತೆಯನ್ನು ನಾವು ಅರಿತುಕೊಳ್ಳಬೇಕಾಗಿದೆ ಎಂದರು.

ವರ್ಣ ವಿರಾಸತ್ ಪ್ರಶಸ್ತಿ ಪುರಸ್ಕೃತ ಹೈದರಾಬಾದಿನ ಹಿರಿಯ ಕಲಾವಿದ ಸೂರ್ಯಪ್ರಕಾಶ್ ಮಾತನಾಡಿ, ಚಿತ್ರಕಲಾವಿದರ ಈ ಮಟ್ಟದ ಶಿಬಿರಗಳು ಅಪರೂಪದ ಕೊಡುಗೆ. 50ರ ದಶಕದಲ್ಲಿ ಶ್ರೀನಗರದಲ್ಲಿ ಜಿ.ಆರ್. ಸಂತೋಷ್ ಆರಂಭಿಸಿದ್ದ ಈ ಪ್ರಕ್ರಿಯೆ ಬಳಿಕ ರಾಷ್ಟ್ರೀಯ ಅಕಾಡೆಮಿ ಹಾಗೂ ಕಾರ್ಪೊರೇಟ್ ವಲಯಗಳವರು ಮುಂದುವರಿಸಿದ್ದು ಇದೀಗ ಶಿಕ್ಷಣ ಸಂಸ್ಥೆಗಳು ಮುಂದುವರಿಸುತ್ತಿರುವುದು ಸಂತಸ ತಂದಿದೆ ಎಂದರು.

ಕಲಾವಿದ ಬೆಂಗಳೂರಿನ ಶಶಿಧರ್ ಮಾತನಾಡಿ, ಹಿಂದುಳಿದಿರುವ ಪರಂಪರೆಯ ಕಲೆಗಳು, ನೈಸರ್ಗಿಕ ವರ್ಣಗಳ ಕುರಿತ ಅಧ್ಯಯನ ನಡೆಯಬೇಕಾಗಿದೆ. ಕಲೆ ಪರಿಸರ ಸ್ನೇಹಿಯಾಗಬೇಕಿದೆ ಎಂದರು.

ಸಂಘಟಕ, ಡಾ. ಎಂ. ಮೋಹನ ಆಳ್ವ ಮಾತನಾಡಿ ಉತ್ತಮ ಮನಸ್ಸು ಹಾಗೂ ಕನಸಿಗೆ ಶಕ್ತಿ ತುಂಬುವ ಕೆಲಸ ಶಿಕ್ಷಣದ ಮೂಲಕ ನಡೆದಾಗ ಶಿಕ್ಷಣ ಅರ್ಥಪೂರ್ಣವಾಗುತ್ತದೆ. ಶಿಕ್ಷಣದ ಚೌಕಟ್ಟಿನಿಂದ ಹೊರಗುಳಿದರೂ ಕಲಾವಿದರಾಗಿ ಅರ್ಪಣಾ ಮನೋಭಾವದಿಂದ ಸಾಧನೆ ಮಾಡಿದವರು ಎಳೆಯರಿಗೆ ಸ್ಫೂರ್ತಿಯಾಗಬೇಕು ಎನ್ನುವ ಕಾರಣಕ್ಕೆ ವರ್ಣ, ಶಿಲ್ಪ ವಿರಾಸತ್ ನಮ್ಮ ಯುವ ಸಮುದಾಯದ ಮುಂದಿಡಲಾಗಿದೆ ಎಂದರು.

ಕಲಾವಿದ ಡಾ.ಅಖ್ತರ್ ಹುಸೇನ್, ಶಿಬಿರದ ಸಲಹಾ ಸಮಿತಿಯ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಪುರುಷೋತ್ತಮ ಅಡ್ವೆ ಇದ್ದರು. ವರ್ಣ ವಿರಾಸತ್‌ನ 10 ಮಂದಿ , ಶಿಲ್ಪ ವಿರಾಸತ್‌ನಲ್ಲಿ ಪಾಲ್ಗೊಂಡ 31 ಕಲಾವಿದರನ್ನು ಪ್ರಮಾಣಪತ್ರ ಸಹಿತ ಗೌರವಿಸಲಾಯಿತು.

> ಬಹುಪ್ರಕಾರದ ಕಲಾವಿದರನ್ನು ಶಿಬಿರದ ಮೂಲಕ ಏಕ ವೇದಿಕೆಗೆ ಕರೆತರುವ ಮೂಲಕ ರಾಷ್ಟ್ರಮಟ್ಟದಲ್ಲಿ ಕಲಾವಿದರು ಪ್ರಾಯೋಗಿಕವಾಗಿ ತಮ್ಮ ಅನುಭವ, ಚಿಂತನೆಗಳನ್ನು ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗಿದೆ
> • ಎಂ.ಎಸ್. ಫಾರೂಕ್



ಹೈದರಾಬಾದಿನ ಹಿರಿಯ ಕಲಾವಿದ ಸೂರ್ಯಪ್ರಕಾಶ್ ಅವರಿಗೆ ವರ್ಣ ವಿರಾಸತ್ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು.



ಆಳ್ವಾಸ್ ವಿರಾಸತ್‌ನಲ್ಲಿ ಶನಿವಾರ ಆಳ್ವಾಸ್ ವಿದ್ಯಾರ್ಥಿನಿಯರು ಪ್ರದರ್ಶಿಸಿದ ಬಂಜಾರ ನೃತ್ಯದ ನೋಟ.



ಶನಿವಾರ ರಾತ್ರಿ ಚೆನ್ನೈನ ಶೈಲಸುಧಾ ಅಕಾಡೆಮಿಯವರು ಪ್ರಸ್ತುತ ಪಡಿಸಿದ ಕೂಚುಪುಡಿ ನೃತ್ಯದ ನೋಟಗಳು.



ಬೆಂಗಳೂರಿನ ನೃತ್ಯಾಂತರ ಅಕಾಡೆಮಿಯವರು ಪ್ರಸ್ತುತ ಪಡಿಸಿದ ಒಡಿಸ್ಸಿ ನೃತ್ಯದ ನೋಟಗಳು.

ಕನ್ನಡಪ್ರಭ
ಬುಧವಾರ 2.1.2019
ಮಂಗಳೂರು

ಕುಂಚದಿಂದ ಅರಳುವ ಕಲೆಗೆ ಸಂಘರ್ಷ ದೂರ ಮಾಡುವ ಶಕ್ತಿ: ಚಾರುಕೀರ್ತಿ ಶ್ರೀ

# ಆಳ್ವಾಸ್ ವರ್ಣ ವಿರಾಸತ್ ರಾಷ್ಟ್ರ ಮಟ್ಟದ ಚಿತ್ರಕಲಾ ಶಿಬಿರ ಚಾಲನೆ

• ಕನ್ನಡಪ್ರಭ ವಾರ್ತೆ
ಮೂಡುಬಿದಿರೆ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಶ್ರಯದಲ್ಲಿ 25ನೇ ವರ್ಷದ ಆಳ್ವಾಸ್ ವಿರಾಸತ್‌ಗೆ ಪೂರಕವಾಗಿ ಜ.1ರಿಂದ 6ರ ವರೆಗೆ ನಡೆಯಲಿರುವ ಆಳ್ವಾಸ್ ವರ್ಣ ವಿರಾಸತ್- 2019 ರಾಷ್ಟ್ರ ಮಟ್ಟದ ಚಿತ್ರಕಲಾ ಶಿಬಿರಕ್ಕೆ ವಿದ್ಯಾಗಿರಿಯ ಡಾ.ವಿ.ಎಸ್. ಆಚಾರ್ಯ ಸಭಾಭವನದಲ್ಲಿ ಮಂಗಳವಾರ ಚಾಲನೆ ನೀಡಲಾಯಿತು.

ಮೂಡುಬಿದಿರೆ ಶ್ರೀ ಜೈನಮಠದ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಕಲಾಶಿಬಿರಕ್ಕೆ ಚಾಲನೆ ನೀಡಿ, ಚಿತ್ರಕಲಾವಿದನ ಕುಂಚದಿಂದ ಅರಳುವ ಕಲೆಯಲ್ಲಿ ಸಂಘರ್ಷವನ್ನು ದೂರ ಮಾಡುವ ಶಕ್ತಿಯಿದೆ. ಸಂದೇಶಗಳ ಮೂಲಕ ಸಂಘರ್ಷಗಳು ದೂರವಾದಾಗ ಸಾಮಾಜಿಕವಾಗಿ ಸಾಮರಸ್ಯ ಬೆಳೆಯುತ್ತದೆ ಎಂದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.



ಮೂಡುಬಿದಿರೆ ಶ್ರೀ ಜೈನಮಠದ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಕಲಾಶಿಬಿರಕ್ಕೆ ಚಾಲನೆ ನೀಡುತ್ತಿರುವುದು.

ದೇಶದ ವಿವಿಧ ರಾಜ್ಯಗಳಿಂದ ಶಿಬಿರದಲ್ಲಿ ಭಾಗವಹಿಸಿದ ಕಲಾವಿದರಿಗೆ ಕುಂಚ ಪರಿಕರಗಳನ್ನು ನೀಡಿ ಸ್ವಾಗತಿಸಿದರು. ಕಾಷ್ಠ ಕಲಾವಿದ ರಾಮಮೂರ್ತಿ, ಟೆರಕೋಟಾ ಕಲಾವಿದ ಉಲ್ಲಾಸ್ ಕರ್ದೆ, ಶಿಬಿರ ಸಲಹಾ ಸಮಿತಿಯ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಆಳ್ವಾಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಕುರಿಯನ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ.ರಮೇಶ್ ಶೆಟ್ಟಿ ಉಪಸ್ಥಿತರಿದ್ದರು. ದೀಕ್ಷಾ ಗೌಡ ಕಾರ್ಯಕ್ರಮ ನಿರೂಪಿಸಿದರು.

ವಿಜಯವಾಣಿ

VIJAYAVANI » MANGALURU

ಬುಧವಾರ 2 ಜನವರಿ 2019

2 JANUARY 2019


# ಕಲೆಯಿಂದ ಸಂಘರ್ಷ ದೂರ

## ಆಳ್ವಾಸ್ ವರ್ಣ ವಿರಾಸತ್‌ಗೆ ಭಟ್ಟಾರಕ ಶ್ರೀ ಚಾಲನೆ



ಆಳ್ವಾಸ್ ವರ್ಣ ವಿರಾಸತ್‌ಗೆ ಮೂಡುಬಿದಿರೆ ಶ್ರೀ ಜೈನಮಠದ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಚಾಲನೆ ನೀಡಿದರು. ವಿವೇಕ್ ಆಳ್ವ, ರಾಮಮೂರ್ತಿ ಮತ್ತಿತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಮೂಡುಬಿದಿರೆ

ಸಮಾಜ ಮಾತ್ರವಲ್ಲ, ನಮ್ಮೊಳಗೂ ಹಲವು ಸಂಘರ್ಷ ನಡೆಯುತ್ತಿರುತ್ತದೆ. ಪ್ರತಿಯೊಬ್ಬ ಚಿತ್ರ ಕಲಾವಿದನ ಕುಂಚದಿಂದ ಅರಳುವ ಕಲೆಯಲ್ಲಿ ಸಂಘರ್ಷ ದೂರ ಮಾಡುವ ಶಕ್ತಿಯಿದೆ. ಸಂದೇಶಗಳ ಮೂಲಕ ಸಂಘರ್ಷ ದೂರ ವಾದಾಗ ಸಾಮಾಜಿಕ ಸಾಮರಸ್ಯ ಬೆಳೆಯುತ್ತದೆ ಎಂದು ಮೂಡುಬಿದಿರೆ ಶ್ರೀ ಜೈನಮಠದ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಹೇಳಿದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಆಶ್ರಯದಲ್ಲಿ ನಡೆಯುವ 25ನೇ ವರ್ಷದ ಆಳ್ವಾಸ್ ವಿರಾಸತ್‌ಗೆ ಪೂರಕವಾಗಿ ಜ.1ರಿಂದ 6ರವರೆಗೆ ನಡೆಯಲಿರುವ ಆಳ್ವಾಸ್ ವರ್ಣ ವಿರಾಸತ್ 2019 ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರಕ್ಕೆ ವಿದ್ಯಾಗಿರಿಯ ಡಾ.ವಿ.ಎಸ್.ಆಚಾರ್ಯ ಸಭಾಭವನದಲ್ಲಿ ಮಂಗಳವಾರ ಚಾಲನೆ ನೀಡಿ ಮಾತನಾಡಿದರು.

» **25ನೇ ವರ್ಷದ ಆಳ್ವಾಸ್ ವಿರಾಸತ್ ಪೂರಕವಾಗಿ ಜನವರಿ 6ರವರೆಗೆ ವರ್ಣ ವಿರಾಸತ್ ರಾಷ್ಟ್ರ ಮಟ್ಟದ ಚಿತ್ರಕಲಾ ಶಿಬಿರ**

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಅಧ್ಯಕ್ಷತೆ ವಹಿಸಿದ್ದರು. ದೇಶದ ವಿವಿಧ ರಾಜ್ಯಗಳಿಂದ ಶಿಬಿರದಲ್ಲಿ ಭಾಗವಹಿಸಿದ ಕಲಾವಿದರಿಗೆ ಕುಂಚ ಪರಿಕರಗಳನ್ನು ನೀಡಿ ಸ್ವಾಗತಿಸಿದರು. ಕಾಷ್ಠ ಕಲಾವಿದ ರಾಮಮೂರ್ತಿ, ಟೆರಕೋಟಾ ಕಲಾವಿದ ಉಲ್ಲಾಸ್ ಕರ್ದೆ, ಶಿಬಿರ ಸಲಹಾ ಸಮಿತಿಯ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಆಳ್ವಾಸ್ ಪದವಿ ಕಾಲೇಜು ಪ್ರಾಂಶುಪಾಲ ಡಾ.ಕುರಿಯನ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ.ರಮೇಶ್ ಶೆಟ್ಟಿ ಉಪಸ್ಥಿತರಿದ್ದರು. ದೀಕ್ಷಾ ಗೌಡ ಕಾರ್ಯಕ್ರಮ ನಿರೂಪಿಸಿದರು.

# ಮೂಡುಬಿದಿರೆ: ರಜತ ವಿರಾಸತ್‌ಗೆ ತೆರೆ



**ಮೂಡುಬಿದಿರೆ: ಮೂರು ದಿನಗಳ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಆಳ್ವಾಸ್ ವಿರಾಸತ್‌ನಲ್ಲಿ ಶಂಕರ್ ಮಹಾದೇವನ್ ರಸಮಂಜರಿ ನಡೆಸಿಕೊಟ್ಟರು.**

ಮೂಡುಬಿದಿರೆ, ಜ. 6: ಮೂರು ದಿನಗಳ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಆಳ್ವಾಸ್ ವಿರಾಸತ್‌ಗೆ ರವಿವಾರ ರಾತ್ರಿ ತೆರೆ ಬಿತ್ತು.

ಉದ್ಘಾಟನ ಸಂದರ್ಭ ಅನಿರೀಕ್ಷಿತವಾಗಿ ಆಗಮಿಸಿ ಶುಭಾಶೀರ್ವಚನವಿತ್ತ ಪೇಜಾವರ ಶ್ರೀಗಳು, 'ಸಾಮಾಜಿಕ ಬದುಕು ಸಂಗೀತದಂತಾಗಬೇಕು' ಎಂಬ ಸಾಮರಸ್ಯದ ಸಂದೇಶ ನೀಡಿದ್ದು ಇಡಿಯ ವಿರಾಸತ್‌ನಲ್ಲಿ ಪ್ರತಿಫಲಿಸಿತು. ಗೀತಸುಧೆಯನ್ನು ನೆರೆದ ಮಂದಿಗೆ ಉಣಬಡಿಸಿ ಸಂಗೀತದ ಮೂಲಕ, ದೇಶ, ಭಾಷೆ, ಜಾತಿ, ವರ್ಗ ಭೇದ ಮೀರಿ ಜನರನ್ನು ಸಾಮರಸ್ಯದ ಬಲೆಯಲ್ಲಿ ಹಿಡಿದಿಟ್ಟುಕೊಂಡಿತು.

ಸುವಿಶಾಲ ವೇದಿಕೆ, 50,000ಕ್ಕೂ ಅಧಿಕ ಪ್ರೇಕ್ಷಕರು ಕುಳಿತುಕೊಳ್ಳಬಹುದಾದ ಗ್ಯಾಲರಿಗಳು, ಶಿಸ್ತು, ಸಮಯಪ್ರಜ್ಞೆ, ವಿರಾಸತ್‌ನ ಸಂಭ್ರಮವನ್ನು ಇನ್ನಷ್ಟು ಹೆಚ್ಚಿಸಿದ ಶಿಲ್ಪ ವಿರಾಸತ್, ವರ್ಣ ವಿರಾಸತ್ ಎಲ್ಲವೂ ಮೇಳೈಸಿ ರಜತ ಸಂಭ್ರಮದ ಆಳ್ವಾಸ್ ವಿರಾಸತ್ -2019 ಯಶಸ್ವಿಯೆನಿಸಿತು.

## ಮನಗೆದ್ದಿತ್ತು ಶಂಕರ್ ಮಹಾದೇವನ್ ಚಿತ್ರ ರಸಸಂಜೆ

ರಜತ ಸಂಭ್ರಮದಲ್ಲಿರುವ ಆಳ್ವಾಸ್ ವಿರಾಸತ್ -2019 ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದ ಕೊನೆಯ ದಿನ ರವಿವಾರ ಪ್ರಸಿದ್ಧ ಚಲನಚಿತ್ರ ಗಾಯಕ ಶಂಕರ್ ಮಹಾದೇವನ್ ಪುತ್ರರಾದ ಸಿದ್ಧಾರ್ಥ್ ಮಹಾದೇವನ್ ಮತ್ತು ಶಿವಂ ಮಹಾದೇವನ್ ಜತೆಸೇರಿ ಪ್ರಸ್ತುತಪಡಿಸಿದ 'ಚಿತ್ರ ರಸಸಂಜೆ' ನೆರೆದ ಅರ್ಧ ಲಕ್ಷಕ್ಕೂ ಅಧಿಕ ಶ್ರೋತೃಗಳ ಮನಗೆದ್ದಿತು.

ಸಹಗಾಯನದಲ್ಲಿ ರಮಣ್, ರಸಿಕಾ ಚಂದ್ರಶೇಖರ್, ಡ್ರಮ್ಸ್‌ನಲ್ಲಿ ಮನೋಜ್ ತಪ್ಲಿಯಾನ್, ಕೀ ಬೋರ್ಡ್‌ನಲ್ಲಿ ಸೌಮಿಲ್ ಶೃಂಗಾಪುರೆ, ಗೀಟಾರ್‌ನಲ್ಲಿ ಶಾನ್ ಪಿಂಟೋ, ಬೇಸ್ ಗಿಟಾರ್‌ನಲ್ಲಿ ದಿವ್ಯಜ್ಯೋತಿ ನಾಥ್, ಡೋಲಕ್‌ನಲ್ಲಿ ಪ್ರಸಾದ್ ಮಲೋಂಡ್ಕರ್, ಡೋಲ್‌ನಲ್ಲಿ ದೀಪಕ್ ಭಟ್ ಮತ್ತು ವೆಸ್ಟರ್ನ್ ಪರ್ಕಶನ್‌ನಲ್ಲಿ ಅನುಪಂ ದೇಘಟಕ್ ಸಹಕರಿಸಿದರು.

## 'ನಂಬಲಾಗುತ್ತಿಲ್ಲ; ನಿಮ್ಮೆದುರು ಚಿಕ್ಕವರಾಗಿದ್ದೇವೆ'

ಇದು ನಂಬಲಸಾಧ್ಯ. ನಾವು ಕುಬ್ಜರಾದಂತೆ ಭಾಸವಾಗುತ್ತಿದೆ. ಇಲ್ಲಿ ಚರಿತ್ರೆ ನಿರ್ಮಾಣವಾಗಿದೆ. ಎಲ್ಲಾದರೂ ಹೀಗೆ ಸಮಯಕ್ಕೆ ಸರಿಯಾಗಿ ಸಂಗೀತ ಕಾರ್ಯಕ್ರಮ ಪ್ರಾರಂಭವಾದ ನಿದರ್ಶನವಿದೆಯೋ!' ಹೀಗೆಂದು ಉದ್ಗರಿಸಿದ್ದು ಖ್ಯಾತ ಚಲನಚಿತ್ರ ಗಾಯಕ ಶಂಕರ್ ಮಹಾದೇವನ್ .

ಆಳ್ವಾಸ್ ವಿರಾಸತ್ 2019ರ ಕೊನೆಯ ದಿನವಾದ ರವಿವಾರ 'ಶ್ರೀ ಗಣೇಶಾಯ' ಹಾಡಿನೊಂದಿಗೆ ಚಿತ್ರ ರಸ ಸಂಜೆ ಕಾರ್ಯಕ್ರಮ ಆರಂಭಿಸಿದ ಬೆನ್ನಲ್ಲೇ, ಸೇರಿದ ಅರ್ಧ ಲಕ್ಷಕ್ಕೂ ಅಧಿಕ ಶ್ರೋತೃಗಳನ್ನು ನೋಡಿ ದಂಗಾದ ಶಂಕರ್ ಮಹಾದೇವನ್, ಯಾರೂ ಸಾಗದ ಹಾದಿಯನ್ನು ಡಾ। ಮೋಹನ ಆಳ್ವಾಜಿ ತೋರಿಸಿ ಕೊಟ್ಟಿದ್ದಾರೆ, ತಾವು ನಡೆಯುವ ಜತೆಗೆ ನಮ್ಮೆಲ್ಲರನ್ನೂ ನಡೆಸಿಕೊಂಡು ಹೋಗುತ್ತಿದ್ದಾರೆ' ಎಂದು ಉದ್ಗರಿಸಿ 'ಲಕ್ಷ್ಯ' ಹಿಂದಿ ಚಿತ್ರದ ಹಾಡನ್ನು ಡಾ। ಆಳ್ವರಿಗೆ ಸಮರ್ಪಿಸಿದರು.

ಸಹಗಾಯಕರಾದ ರಮಣ್ ಮತ್ತು ರಸಿಕಾ ಚಂದ್ರಶೇಖರ್ ಅವರೊಂದಿಗೆ 'ದಿಲ್ ಚಾಹತಾ ಹೇ' ಹಾಡು ಹಾಡಿದ ಶಂಕರ್ 'ಕಲ್‌ನಹೋ' ಚಿತ್ರದ 'ಪ್ರೆಟ್ಟಿ ವುಮೆನ್' ಹಾಡನ್ನು ಮಹಿಳೆಯರಿಗೆ ಸಮರ್ಪಿಸಿದರು. 'ಇಟೀಸ್ ದ ಟೈಮ್ ಟು ಡಿಸ್ಕೋ' ಹಾಡಿಗೆ ಜನ ನಿಂತಲ್ಲೇ ಹೆಜ್ಜೆ ಹಾಕಿದರು. ಶಂಕರ್ ಪುತ್ರ ಶಿವಂ ಮಹಾದೇವನ್ 'ಮನ್‌ಮಸ್ತ್‌ಮಗನ್' ಹಾಡಿ ರಂಜಿಸಿದರು. ಕನ್ನಡದಲ್ಲಿ 'ಸಾರಥಿ' ಚಿತ್ರದ 'ಕೈ ಮುಗಿದು ಏರು ನೀನು ಕನ್ನಡದ ತೇರು', 'ಮುಕುಂದ ಮುರಾರಿ' ಹಾಡಿದರು. ಕೊನೆಯಲ್ಲಿ 'ತಾರೆ ಜಮೀನ್ ಪರ್' ಚಿತ್ರದ ಹಾಡನ್ನು ಅವರು ತಾಯಂದಿರಿಗೆ ಸಮರ್ಪಿಸಿದರು.

## ಸೂರ್ಯಪ್ರಕಾಶ್‌ಗೆ 'ಆಳ್ವಾಸ್ ವರ್ಣ ವಿರಾಸತ್-2019' ಪ್ರಶಸ್ತಿ ಪ್ರದಾನ



**ಮೂಡುಬಿದಿರೆ: ಹೈದರಾಬಾದಿನ ಹಿರಿಯ ಚಿತ್ರ ಕಲಾವಿದ ಸೂರ್ಯ ಪ್ರಕಾಶ್ ಅವರಿಗೆ 2019ನೇ ಸಾಲಿನ ರಾಷ್ಟ್ರಮಟ್ಟದ 'ಆಳ್ವಾಸ್ ವರ್ಣ ವಿರಾಸತ್ ಪ್ರಶಸ್ತಿ'ಯನ್ನು ಪುತ್ತಿಗೆ ವಿವೇಕಾನಂದ ನಗರದ ವಿರಾಸತ್ ವೇದಿಕೆಯಲ್ಲಿ ರವಿವಾರ ಸಂಜೆ ಪ್ರದಾನ ಮಾಡಲಾಯಿತು.**

**ರಜತ ಸಂಭ್ರಮದ ವಿರಾಸತ್ ಉತ್ಸವಕ್ಕೆ ಪೂರಕವಾಗಿ ಜ.1ರಿಂದ 6ರ ವರೆಗೆ ವಿದ್ಯಾಗಿರಿಯಲ್ಲಿ 'ಆಳ್ವಾಸ್ ವರ್ಣವಿರಾಸತ್' -ರಾಷ್ಟ್ರಮಟ್ಟದ ಚಿತ್ರ ಕಲಾವಿದರ ಶಿಬಿರ ನಡೆದಿತ್ತು. ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್, ರಾಜ್ಯ ವನ್ಯಜೀವಿ ಸೊಸೈಟಿ ಸದಸ್ಯ ರಾಮಚಂದ್ರ ಶೆಟ್ಟಿ, ಜ್ಞಾನ ಸುಧಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಧಾಕರ ಶೆಟ್ಟಿ, ಉದ್ಯಮಿ ಉದಯ ಶೆಟ್ಟಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ। ಎಂ. ಮೋಹನ ಆಳ್ವ, ಶಿಬಿರದ ಸಲಹಾ ಸಮಿತಿಯ ಗಣೇಶ ಸೋಮಯಾಜಿ, ಕೋಟಿಪ್ರಸಾದ್ ಆಳ್ವ, ಪುರುಷೋತ್ತಮ ಅಡ್ವೆ ಉಪಸ್ಥಿತರಿದ್ದರು.**

ಪ್ರಜಾವಾಣಿ
ಸೋಮವಾರ • ಜನವರಿ 7, 2019

### ಮೂಡುಬಿದಿರೆ: ಆಳ್ವಾಸ್ ವರ್ಣ ವಿರಾಸತ್, ಶಿಲ್ಪ ವಿರಾಸತ್ ಸಮಾರೋಪ

# ‘ಕಲಾವಿದರ ಸತ್ಫಲ ಸಮಾಜಕ್ಕೆ ಸಿಗಲಿ’

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಕಲಾವಿದರಲ್ಲಿ ಅಭಿವ್ಯಕ್ತಿಯ ಶಕ್ತಿ; 41 ಕಲಾವಿದರಿಗೆ ಗೌರವ
- ಚಿತ್ರಕಲಾವಿದರ ವಿರಾಸತ್ ಶಿಬಿರಗಳು ಅಪರೂಪದ ಕೊಡುಗೆ
- ‘ಕಲೆಗಳು, ನೈಸರ್ಗಿಕ ವರ್ಣಗಳ ಕುರಿತ ಅಧ್ಯಯನ ನಡೆಯಲಿ’

ಮೂಡುಬಿದಿರೆ: ‘ಸಮಾಜದ ಪ್ರಗತಿಯ ಹಾದಿಯಲ್ಲಿ ಉತ್ತಮ ಅಂಶಗಳ ಸಾರವನ್ನು ಕಲಾವಿದರು ಸ್ವೀಕರಿಸಿ ಸತ್ಫಲಗಳನ್ನು ಪ್ರತಿಫಲವಾಗಿ ಸಮಾಜಕ್ಕೆ ನೀಡುವವರಾಗಬೇಕು’ ಎಂದು ಜೈನ ಮಠದ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಹೇಳಿದರು.

ಭನುವಾರ ವಿದ್ಯಾಗಿರಿಯ ಡಾ.ವಿ. ಎಸ್. ಆಚಾರ್ಯ ಸಭಾಂಗಣದಲ್ಲಿ ಆಳ್ವಾಸ್ ವಿರಾಸತ್ ಅಂಗವಾಗಿ ಜರಗಿದ ರಾಷ್ಟ್ರೀಯ ಚಿತ್ರಕಲಾವಿದರು ಮತ್ತು ಶಿಲ್ಪ ಕಲಾವಿದರ ಕೂಡುವಿಕೆಯಲ್ಲಿ ನಡೆದ ವರ್ಣ ವಿರಾಸತ್ ಹಾಗೂ ಶಿಲ್ಪ ವಿರಾಸತ್‌ನ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ವರ್ಣ ವಿರಾಸತ್ ಪ್ರಶಸ್ತಿ ಪುರಸ್ಕೃತರಾಗಲಿರುವ ಹೈದರಾಬಾದಿನ ಹಿರಿಯ ಕಲಾವಿದ ಸೂರ್ಯಪ್ರಕಾಶ್ ಮಾತನಾಡಿ ಚಿತ್ರಕಲಾವಿದರ ಈ ಮಟ್ಟದ ಶಿಬಿರಗಳು ಅಪರೂಪದ ಕೊಡುಗೆ. 50ರ ದಶಕದಲ್ಲಿ ಶ್ರೀನಗರದಲ್ಲಿ ಜಿ.ಆರ್. ಸಂತೋಷ್ ಆರಂಭಿಸಿದ್ದ ಈ ಪ್ರಕ್ರಿಯೆ ಬಳಿಕ ರಾಷ್ಟ್ರೀಯ ಅಕಾಡೆಮಿ ಹಾಗೂ ಕಾರ್ಪೊರೇಟ್ ವಲಯಗಳವರು ಮುಂದುವರೆಸಿದ್ದು ಇದೀಗ ಶಿಕ್ಷಣ ಸಂಸ್ಥೆಗಳು ಈ ಪರಂಪರೆಯನ್ನು ಮುಂದುವರೆಸುತ್ತಿರುವುದು ಸಂತಸ ತಂದಿದೆ. ಎಳೆಯರು ಸಂಸ್ಕೃತಿ ಪ್ರೀತಿಯಿಂದ ಕಲೆಯನ್ನು ಬೆಳೆಸುವ ಕರ್ತವ್ಯ ನಿರ್ವಹಿಸಬೇಕಾಗಿದೆ’ ಎಂದವರು ಹೇಳಿದರು.

ಕಲಾವಿದ ಬೆಂಗಳೂರಿನ ಶಶಿಧರ್ ಮಾತನಾಡಿ, ‘ಹಿಂದುಳಿದಿರುವ ಪರಂಪರೆಯ ಕಲೆಗಳು, ನೈಸರ್ಗಿಕ ವರ್ಣಗಳ ಕುರಿತ ಅಧ್ಯಯನ ನಡೆಯಬೇಕಾಗಿದೆ. ಕಲೆ ಪರಿಸರ ಸ್ನೇಹಿಯಾಗಬೇಕಿದೆ ಎಂದರು.

ವರ್ಣವಿರಾಸತ್‌ನ 10, ಶಿಲ್ಪ ವಿರಾಸತ್‌ನಲ್ಲಿ ಪಾಲ್ಗೊಂಡ 31 ಕಲಾವಿದರನ್ನು ಪ್ರಮಾಣಪತ್ರ ಸಹಿತ ಗೌರವಿಸಲಾಯಿತು. ವಿದ್ಯಾರ್ಥಿನಿ ದೀಕ್ಷಾ ಗೌಡ ನಿರೂಪಿಸಿದರು. ಚಿತ್ರ ಕಲಾವಿದ ಡಾ, ಅಖ್ತರ್ ಹುಸೇನ್, ಶಿಬಿರದ ಸಲಹಾ ಸಮಿತಿಯ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಪುರುಷೋತ್ತಮ ಅಡ್ವೆ ಉಪಸ್ಥಿತರಿದ್ದರು.




ಮೂಡುಬಿದಿರೆಯ ವಿದ್ಯಾಗಿರಿಯಲ್ಲಿ ಭಾನುವಾರ ಮುಕ್ತಾಯಗೊಂಡ ಆಳ್ವಾಸ್ ಶಿಲ್ಪ ವಿರಾಸತ್, ವರ್ಣ ವಿರಾಸತ್ ಸಮಾರಂಭದಲ್ಲಿ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿದರು. ಎಂ.ಎಸ್ ಫಾರೂಕ್, ಡಾ.ಎಂ. ಮೋಹನ ಆಳ್ವ ಇದ್ದರು.

## ‘ಮೌಲಿಕತೆ ಅರಿಯಿರಿ’

ಮುಖ್ಯ ಅತಿಥಿಯಾಗಿದ್ದ ರಾಜ್ಯ ಕ್ರಾಫ್ಟ್ ಕೌನ್ಸಿಲ್‌ನ ಕಾರ್ಯದರ್ಶಿ ಎಂ.ಎಸ್. ಫಾರೂಕ್ ಮಾತನಾಡಿ ‘ಶಿಲ್ಪ, ವರ್ಣ ಹೀಗೆ ಬಹುಪ್ರಕಾರದ ಕಲಾವಿದರನ್ನು ಶಿಬಿರದ ಮೂಲಕ ಏಕ ವೇದಿಕೆಗೆ ಕರೆತರುವ ಮೂಲಕ ರಾಷ್ಟ್ರಮಟ್ಟದಲ್ಲಿ ಕಲಾವಿದರುಗಳು ಪ್ರಾಯೋಗಿಕವಾಗಿ ತಮ್ಮ ಅನುಭವ, ಚಿಂತನೆಗಳನ್ನು ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗಿದೆ. ಇತಿಹಾಸವಾಗುತ್ತಿದ್ದ ಸಾಂಪ್ರದಾಯಿಕ ಕಲೆಗಳ ಮೌಲಿಕತೆಯನ್ನು ನಾವು ಅರಿತುಕೊಳ್ಳಬೇಕಾಗಿದೆ’ ಎಂದರು.

## ಎಳೆಯರಿಗೆ ಸ್ಫೂರ್ತಿ: ಡಾ. ಆಳ್ವ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಮಾತನಾಡಿ ಉತ್ತಮ ಮನಸ್ಸು ಹಾಗೂ ಕನಸಿಗೆ ಶಕ್ತಿ ತುಂಬುವ ಕೆಲಸ ಶಿಕ್ಷಣದ ಮೂಲಕ ನಡೆದಾಗ ಶಿಕ್ಷಣ ಅರ್ಥಪೂರ್ಣವಾಗುತ್ತದೆ. ಶಿಕ್ಷಣದ ಚೌಕಟ್ಟಿನಿಂದ ಹೊರಗುಳಿದರೂ ಕಲಾವಿದರಾಗಿ ಅರ್ಪಣಾ ಮನೋಭಾವದಿಂದ ಸಾಧನೆ ಮಾಡಿದವರು ಎಳೆಯರಿಗೆ ಸ್ಫೂರ್ತಿಯಾಗಬೇಕು ಎನ್ನುವ ಕಾರಣಕ್ಕೆ ವರ್ಣ, ಶಿಲ್ಪ ವಿರಾಸತ್ ನಮ್ಮ ಯುವ ಸಮುದಾಯದ ಮುಂದಿಡಲಾಗಿದೆ’ ಎಂದರು.

ವಿಜಯ ಕರ್ನಾಟಕ VK

ಬುಧವಾರ,2 ಜನವರಿ 2019, ಮಂಗಳೂರು

# ಮೂಡುಬಿದಿರೆ: 4ರಿಂದ ಆಳ್ವಾಸ್ ವಿರಾಸತ್

## ೨೫ ವರ್ಷ ಬೆಳ್ಳಿಹಬ್ಬ ಸಂಭ್ರಮ | ಅಂಚೆ ಇಲಾಖೆಯಿಂದ ವಿಶೇಷ ಅಂಚೆ ಲಕೋಟೆ

■ ವಿಕ ಸುದ್ದಿಲೋಕ ಮಂಗಳೂರು

ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ನಡೆಸುವ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ 'ಆಳ್ವಾಸ್ ವಿರಾಸತ್' ಈ ವರ್ಷ ಬೆಳ್ಳಿಹಬ್ಬದ ಸಂಭ್ರಮದಲ್ಲಿದ್ದು, ಜ.4ರಿಂದ 6ರವರೆಗೆ ಮೂಡುಬಿದಿರೆಯ ಪುತ್ತಿಗೆ ವಿವೇಕಾನಂದ ನಗರದ ಆಳ್ವಾಸ್ ಆವರಣದಲ್ಲಿ ಅದ್ದೂರಿಯಿಂದ ನಡೆಯಲಿದೆ ಎಂದು ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಹೇಳಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 150 ಅಡಿ ಉದ್ದ, 60 ಅಡಿ ಅಗಲದ ವನಜಾಕ್ಷಿ ಕೆ. ಶ್ರೀಪತಿ ಭಟ್ ವೇದಿಕೆಯಲ್ಲಿ ಕಾರ್ಯಕ್ರಮಗಳು ನಡೆಯಲಿದೆ. ಸುಮಾರು 50 ಸಾವಿರಕ್ಕಿಂತ ಹೆಚ್ಚು ಪ್ರೇಕ್ಷಕರು ಕುಳಿತು ನೋಡಬಹುದಾದ ಆಸನ ವ್ಯವಸ್ಥೆ ಇರು[illegible]ಶಾಲ ಪ್ರದೇಶವಿದಾಗಿದ್ದು, ಯಾವುದೇ ಗೊಂದಲ, ನೂಕುನುಗ್ಗಲುಗಳಿಲ್ಲದೆ ಕಾರ್ಯಕ್ರಮ ವೀಕ್ಷಿಸಲು ಸಹಕಾರಿಯಾಗಲಿದೆ ಎಂದರು.

ಆಳ್ವಾಸ್ ವಿರಾಸತ್ ಮೊದಲ ದಿನವಾದ ಜ.4ರಂದು ಸಂಜೆ 5.15ಕ್ಕೆ ಸಾಂಸ್ಕೃತಿಕ ಮೆರವಣಿಗೆಯ ಮೂಲಕ ಉದ್ಘಾಟನಾ ಸಮಾರಂಭ ಪ್ರಾರಂಭವಾಗಲಿದೆ. ನಿಟ್ಟೆ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎನ್. ವಿನಯ ಹೆಗ್ಡೆ ಆಳ್ವಾಸ್ ವಿರಾಸತ್ 2019ನ್ನು ಉದ್ಘಾಟಿಸಲಿದ್ದಾರೆ. ಸಂಸದ ನಳಿನ್ ಕುಮಾರ್ ಕಟೀಲು, ಶಾಸಕ ಎ. ಉಮಾನಾಥ ಕೋಟ್ಯಾನ್, ಮಾಜಿ ಸಚಿವ ಕೆ. ಅಭಯಚಂದ್ರ ಜೈನ್, ಕೆ. ಅಮರನಾಥ ಶೆಟ್ಟಿ, ಕ್ಯಾ. ಗಣೇಶ್ ಕಾರ್ಣಿಕ್, ಜಿಲ್ಲಾಧಿಕಾರಿ ಸಸಿಕಾಂತ ಸೆಂಥಿಲ್, ಅಧಿಕಾರಿಗಳು ಉಪಸ್ಥಿತರಿರುವರು ಎಂದರು.

**ಅಂಚೆ ಲಕೋಟೆಯ ಗೌರವ:** ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಬೃಹತ್ ಸಾಂಸ್ಕೃತಿಕ ಉತ್ಸವ ಆಳ್ವಾಸ್ ವಿರಾಸತ್ 1995ರಲ್ಲಿ ಆರಂಭಗೊಂಡು ಈಗ 25ನೇ ವರ್ಷಾಚರಣೆಯಲ್ಲಿದೆ. ರಜತ ಮಹೋತ್ಸವದ ಗೌರವಾರ್ಥ ಭಾರತೀಯ ಅಂಚೆ ಇಲಾಖೆಯು ವಿಶೇಷ ಅಂಚೆ ಲಕೋಟೆಯನ್ನು ಈ ಸಂದರ್ಭ ಹೊರತರುತ್ತಿದೆ. ಇದರ ಬಿಡುಗಡೆ ಆಳ್ವಾಸ್ ವಿರಾಸತ್ ಸಭಾ ಕಾರ್ಯಕ್ರಮದಲ್ಲಿ ನಡೆಯಲಿದೆ ಎಂದರು.

**ಹರಿಹರನ್‌ರಿಗೆ ಆಳ್ವಾಸ್ ವಿರಾಸತ್ ಪ್ರಶಸ್ತಿ:** ಬೆಳ್ಳಿಹಬ್ಬ ಸಂಭ್ರಮದ ಆಳ್ವಾಸ್ ವಿರಾಸತ್-2019 ಪ್ರಶಸ್ತಿಗೆ ಖ್ಯಾತ ಹಿನ್ನಲೆ ಗಾಯಕ ಹರಿಹರನ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 1 ಲಕ್ಷರೂ. ಮತ್ತು ಪ್ರಶಸ್ತಿಪತ್ರವನ್ನೊಳಗೊಂಡಿದೆ.

ಜ.4ರಂದು ಸಂಜೆ 7ರಿಂದ 9ರವರೆಗೆ ಕೊಲೋನಿಯಲ್ ಕಸಿನ್ಸ್ ಖ್ಯಾತಿಯ ಹರಿಹರನ್ ಮತ್ತು ಲೆಸ್ಲೆ ಲಿವಿಸ್ ಕಲಾವಿದರ ರಸಸಂಯೋಗ ಕಾರ್ಯಕ್ರಮ ನಡೆಯಲಿದ್ದು, ರಾತ್ರಿ 9.15ರಿಂದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಪ್ರತಿಭಾನ್ವಿತ ವಿದ್ಯಾರ್ಥಿ ಕಲಾವಿದರಿಂದ ಆಳ್ವಾಸ್ ಸಾಂಸ್ಕೃತಿಕ ವೈಭವದ ಮೋಹಿನಿಯಾಟ್ಟಂ, ಬಡಗುತಿಟ್ಟು ಯಕ್ಷಗಾನ, ಸಾಹಸಮಯ ಮಲ್ಲಕಂಬ, ಗುಜರಾತ್‌ನ ದಾಂಡಿಯ ನೃತ್ಯಗಳು ನಡೆಯಲಿವೆ ಎಂದರು.

ಜ.5ರಂದು ಸಂಜೆ 6ರಿಂದ 8ರ ವರೆಗೆ ಹಿಂದಿ ಚಿತ್ರರಂಗದ ಪ್ರಸಿದ್ಧ ಹಿನ್ನಲೆ ಗಾಯಕ ಸುಖ್ವಿಂದರ್ ಸಿಂಗ್ ಮತ್ತು ಬಳಗದವರಿಂದ ಗಾನತರಂಗ, ರಾತ್ರಿ 8.10ರಿಂದ 8.40ರವರೆಗೆ ನೃತ್ಯಾಂತರ್ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಬೆಂಗಳೂರು ಅವರಿಂದ ಒಡಿಸ್ಸಿ ನೃತ್ಯ ನಡೆಯಲಿದೆ. 8.45ರಿಂದ 9.30ರವರೆಗೆ ಶೈಲಸುಧಾ ಅಕಾಡೆಮಿ ಚೆನ್ನೈ ಅವರಿಂದ ಕೂಚುಪುಡಿ ನೃತ್ಯ ಹಾಗೂ 9.35ರಿಂದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಪ್ರತಿಭಾನ್ವಿತ ವಿದ್ಯಾರ್ಥಿ ಕಲಾವಿದರಿಂದ ಆಳ್ವಾಸ್ ಸಾಂಸ್ಕೃತಿಕ ವೈಭವದಲ್ಲಿ ಆಂಧ್ರದ ಬಂಜಾರ ನೃತ್ಯ, ಮಣಿಪುರದ ಸ್ಟಿಕ್ ಡ್ಯಾನ್ಸ್, ಶ್ರೀಲಂಕಾದ ಕ್ಯಾಂಡಿಯನ್ ನೃತ್ಯ ಹಾಗೂ ಕಥಕ್ ನೃತ್ಯ ನಡೆಯಲಿದೆ ಎಂದರು.

ಜ.6ರಂದು ಸಂಜೆ 6ರಿಂದ 8ರ ವರೆಗೆ ಶಂಕರ್ ಮಹಾದೇವನ್, ಸಿದ್ಧಾರ್ಥ್ ಮಹಾದೇವನ್ ಮತ್ತು ಶಿವಂ ಮಹಾದೇವನ್ ತಂಡದಿಂದ ಚಿತ್ರ ರಸಸಂಜೆ, ರಾತ್ರಿ 8.10ರಿಂದ 9ರವರೆಗೆ ಪರಂಪರಾ ಕೋಲ್ಕತ್ತಾ ಅವರಿಂದ ರಂಗಭಾರತಿ-ಕಲರ್ಸ್ ಆಫ್ ಭರತನಾಟ್ಯಂ ಹಾಗೂ ರಾತ್ರಿ 9.05ರಿಂದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಪ್ರತಿಭಾನ್ವಿತ ವಿದ್ಯಾರ್ಥಿ ಕಲಾವಿದರಿಂದ ಆಳ್ವಾಸ್ ಸಾಂಸ್ಕೃತಿಕ ವೈಭವದಲ್ಲಿ ಭರತನಾಟ್ಯ, ಮಣಿಪುರದ ಥೋಲ್‌ಚಲಂ, ಪಂಜಾಬ್‌ನ ಬಾಂಗ್ರಾ ನೃತ್ಯ ಹಾಗೂ ಯಕ್ಷಗಾನ ಅಗ್ರಪೂಜೆ ನಡೆಯಲಿದೆ ಎಂದರು.

**ಆಳ್ವಾಸ್ ವರ್ಣವಿರಾಸತ್:** ಡಿ.22ರಿಂದ ಜ.6ರ ವರೆಗೆ ವಿದ್ಯಾಗಿರಿಯ ಆಳ್ವಾಸ್ ನುಡಿಸಿರಿ ಸಭಾಂಗಣದಲ್ಲಿ ರಾಷ್ಟ್ರಮಟ್ಟದ ಸಮಕಾಲೀನ ಚಿತ್ರಕಲಾವಿದರಿಂದ ಚಿತ್ರಕಲಾ ಶಿಬಿರ ನಡೆಯುತ್ತಿದೆ. ಐವತ್ತಕ್ಕಿಂತಲೂ ಅಧಿಕ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ದೇಶ-ವಿದೇಶಗಳಲ್ಲಿ ನೀಡಿದ ಸೂರ್ಯಪ್ರಕಾಶ್ ಅವರಿಗೆ 2019ರ ಆಳ್ವಾಸ್ ವರ್ಣವಿರಾಸತ್ ಪುರಸ್ಕಾರ ನೀಡಲಾಗುತ್ತಿದ್ದು, ಜ.6ರಂದು ವಿರಾಸತ್ ವೇದಿಕೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದರು.

ಪ್ರತಿದಿನ 50 ಸಾವಿರಕ್ಕಿಂತಲೂ ಹೆಚ್ಚು ಕಲಾಪ್ರಿಯರು ಸೇರುವ ಈ ಮಹಾ ಉತ್ಸವಕ್ಕೆ ತಮ್ಮ ತಮ್ಮ ವಾಹನಗಳಲ್ಲಿ ಆಗಮಿಸುವವರಿಗೆ ವ್ಯವಸ್ಥಿತವಾದ ವಾಹನ ನಿಲುಗಡೆಯ ಸ್ಥಳಾವಕಾಶ ಮಾಡಲಾಗಿದೆ ಎಂದರು.

ಆಳ್ವಾಸ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ವೇಣು ಗೋಪಾಲ ಶೆಟ್ಟಿ ಉಪಸ್ಥಿತರಿದ್ದರು.

## ಸಾಮರಸ್ಯ ಬೆಸೆಯುವ ಕಲಾಕೃತಿ ರಚನೆಯಾಗಲಿ



ರಾಷ್ಟ್ರಮಟ್ಟದ ಆಳ್ವಾಸ್ ವರ್ಣ ವಿರಾಸತ್ 2019ನ್ನು ಮಂಗಳವಾರ ಜೈನಮಠದ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಉದ್ಘಾಟಿಸಿದರು.

**ಮೂಡುಬಿದಿರೆ:** ಸಮಾಜದಲ್ಲಿ ಇಂದು ಸಂಘರ್ಷಮಯ ವಾತಾವರಣ ಸೃಷ್ಟಿಯಾಗುತ್ತಿದ್ದು ಕಲಾವಿದರು ತಮ್ಮ ಕುಂಚದ ಮೂಲಕ ಸಮಾಜದಲ್ಲಿ ಸಾಮರಸ್ಯವನ್ನು ಬೆಸೆಯುವ, ಸಮಾಜಕ್ಕೆ ಒಳಿತನ್ನು ಉಂಟು ಮಾಡುವ ಸಂದೇಶವುಳ್ಳ ಕಲಾಕೃತಿಗಳನ್ನು ರಚಿಸಬೇಕು ಎಂದು ಜೈನಮಠದ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಹೇಳಿದರು.

ಆಳ್ವಾಸ್ ವಿರಾಸತ್‌ಗೆ ಪೂರ್ವಭಾವಿಯಾಗಿ ನಡೆಯುವ ರಾಷ್ಟ್ರಮಟ್ಟದ ಆಳ್ವಾಸ್ ವರ್ಣ ವಿರಾಸತ್ 2019ನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಆಳ್ವಾಸ್ ಸಂಸ್ಥೆಯು ಮಹತ್ವದ ಕೆಲಸವನ್ನು ಮಾಡುತ್ತಿದೆ ಎಂದು ಪ್ರಶಂಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ಕಲೆಯನ್ನು ಉಳಿಸಿ ಬೆಳೆಸುವುದು ನಮ್ಮ ಕರ್ತವ್ಯವಾಗಿದ್ದು ಆ ಕೆಲಸವನ್ನು ತಮ್ಮ ಸಂಸ್ಥೆಯು ನಡೆಸುತ್ತಿದೆ. ದೇಶದ ನಾನಾ ಭಾಗಗಳ ಕಲಾವಿದರ ಕಲಾ ನೈಪುಣ್ಯತೆಯನ್ನು ಅರಿಯಲು ಇಲ್ಲಿ ಸಾಧ್ಯವಿದ್ದು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಶಿಬಿರದ ಸಂಚಾಲಕರಾದ ಗಣೇಶ್ ಸೋಮಯಾಜಿ, ಕೋಟಿ ಪ್ರಸಾದ್ ಆಳ್ವ, ಆಳ್ವಾಸ್ ಪದವಿ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ಕುರಿಯಾನ್, ಆಳ್ವಾಸ್ ಪಿಯು ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ರಮೇಶ್ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ದೀಕ್ಷಾ ಗೌಡ ಕಾರ್ಯಕ್ರಮ ನಿರ್ವಹಿಸಿದರು.

ಸಂಯುಕ್ತ ಕರ್ನಾಟಕ

ಬುಧವಾರ, 2, ಜನವರಿ, 2019, ಹುಬ್ಬಳ್ಳಿ

## ಆಳ್ವಾಸ್ ವರ್ಣ ವಿರಾಸತ್ ಚಾಲನೆ

# ಚಿತ್ರಕಲೆಗಿದೆ ಸಂಘರ್ಷ ದೂರ ಮಾಡುವ ಶಕ್ತಿ



ಮೂಡುಬಿದಿರೆ ಶ್ರೀಜೈನಮಠದ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಚಿತ್ರಕಲಾ ಶಿಬಿರಕ್ಕೆ ಚಾಲನೆ ನೀಡಿದರು.

ಸಂ.ಕ. ಸಮಾಚಾರ ಮೂಡುಬಿದಿರೆ

ಸಮಾಜ ಮಾತ್ರವಲ್ಲದೆ, ನಮ್ಮೊಳಗೆ ಕೂಡ ಹಲವಾರು ಸಂಘರ್ಷಗಳು ನಡೆಯುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ಸಂದೇಶಗಳತ್ತ ಒತ್ತು ನೀಡುವುದು ಮುಖ್ಯ. ಪ್ರತಿಯೊಬ್ಬ ಚಿತ್ರಕಲಾವಿದನ ಕುಂಚದಿಂದ ಅರಳುವ ಕಲೆಯಲ್ಲಿ ಸಂಘರ್ಷವನ್ನು ದೂರ ಮಾಡುವ ಶಕ್ತಿ ಇದೆ. ಸಂದೇಶಗಳ ಮೂಲಕ ಸಂಘರ್ಷಗಳ ದೂರವಾದಾಗ ಸಾಮಾಜಿಕವಾಗಿ ಸಾಮರಸ್ಯ ಬೆಳೆಯುತ್ತದೆ ಎಂದು ಮೂಡುಬಿದಿರೆ ಶ್ರೀಜೈನಮಠದ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ತಿಳಿಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಶ್ರಯದಲ್ಲಿ ನಡೆಯುವ 25ನೇ ವರ್ಷದ ಆಳ್ವಾಸ್ ವಿರಾಸತ್‌ಗೆ ಪೂರಕವಾಗಿ ಜ.1ರಿಂದ 6ರವರೆಗೆ ನಡೆಯಲಿರುವ ಆಳ್ವಾಸ್ ವರ್ಣ ವಿರಾಸತ್ 2019 ರಾಷ್ಟ್ರ ಮಟ್ಟದ ಚಿತ್ರಕಲಾ ಶಿಬಿರಕ್ಕೆ ವಿದ್ಯಾಗಿರಿಯ ಡಾ.ವಿ.ಎಸ್ ಆಚಾರ್ಯ ಸಭಾಭವನದಲ್ಲಿ ಮಂಗಳವಾರ ಅವರು ಚಾಲನೆ ನೀಡಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಸಮಾರಂಭದ ಅಧ್ಯಕ್ಷತೆ ವಹಿಸಿ, ದೇಶದ ವಿವಿಧ ರಾಜ್ಯಗಳಿಂದ ಶಿಬಿರದಲ್ಲಿ ಭಾಗವಹಿಸಿದ ಕಲಾವಿದರಿಗೆ ಕುಂಚ ಪರಿಕರಗಳನ್ನು ನೀಡಿ ಸ್ವಾಗತಿಸಿದರು. ಬಳಿಕ ಮಾತನಾಡಿದ ಅವರು, ಕಲೆಯನ್ನು ಉಳಿಸಿ, ಬೆಳೆಸುವುದು ಮುಖ್ಯ. ಅಂತಹ ಕೆಲಸವನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಆಳ್ವಾಸ್ ವಿರಾಸತ್ ಮೂಲಕ ಕಳೆದ 24 ವರ್ಷಗಳಿಂದ ಮಾಡುತ್ತ ಬಂದಿದೆ. ಅದರೊಂದಿಗೆ ಕಳೆದ 10 ವರ್ಷದಿಂದ ಆಳ್ವಾಸ್ ವರ್ಣವಿರಾಸತ್, ಶಿಲ್ಪ ವಿರಾಸತ್ ಮೂಲಕ ಚಿತ್ರ ಹಾಗೂ ಶಿಲ್ಪ ಕಲಾವಿದರಿಗೆ ಮನ್ನಣೆ ನೀಡುತ್ತಿದೆ. ಕಲಾವಿದರಿಂದ ರಚಿತವಾದ 6 ಸಾವಿರದ ಹೆಚ್ಚು ಕಲಾಕೃತಿಗಳನ್ನು ಕ್ಯಾಂಪಸ್‌ನಲ್ಲೇ ಸಂರಕ್ಷಿಸಿದ್ದೇವೆ. ಪ್ರತಿಯೊಬ್ಬ ವಿದ್ಯಾರ್ಥಿಯು ಇಲ್ಲಿರುವ ಕಲಾಕೃತಿಗಳನ್ನು ಸೂಕ್ಷ್ಮವಾಗಿ ಗಮನಿಸಿ, ಪ್ರಜ್ಞಾವಂತ ಮನಸ್ಸನ್ನು ಕಟ್ಟಿಕೊಳ್ಳಬೇಕು ಎಂದರು.

ಕಾಷ್ಠ ಕಲಾವಿದ ರಾಮಮೂರ್ತಿ, ಟೆರಕೋಟಾ ಕಲಾವಿದ ಉಲ್ಲಾಸ್ ಕರ್ದೆ, ಶಿಬಿರ ಸಲಹಾ ಸಮಿತಿಯ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಆಳ್ವಾಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಕುರಿಯನ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ.ರಮೇಶ್ ಶೆಟ್ಟಿ ಉಪಸ್ಥಿತರಿದ್ದರು. ದೀಕ್ಷಾ ಗೌಡ ನಿರೂಪಿಸಿದರು.

ಉದಯವಾಣಿ 2-1-2019
UDAYAVANI - MANIPAL

# ಆಳ್ವಾಸ್ ವರ್ಣ ವಿರಾಸತ್‌ಗೆ ಚಾಲನೆ



ಆಳ್ವಾಸ್ ವರ್ಣ ವಿರಾಸತ್ 2019ಕ್ಕೆ ಶ್ರೀ ಜೈನ ಮಠದ ಭಟ್ಟಾರಕ ಸ್ವಾಮೀಜಿ ಚಾಲನೆ ನೀಡಿದರು.

ಮೂಡುಬಿದಿರೆ, ಜ. 1: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಶ್ರಯದಲ್ಲಿ ನಡೆಯುವ 25ನೇ ವರ್ಷದ ಆಳ್ವಾಸ್ ವಿರಾಸತ್‌ಗೆ ಪೂರಕವಾಗಿ ಜ. 1ರಿಂದ 6ರ ವರೆಗೆ ನಡೆಯಲಿರುವ ಆಳ್ವಾಸ್ ವರ್ಣ ವಿರಾಸತ್ – 2019 ರಾಷ್ಟ್ರ ಮಟ್ಟದ ಚಿತ್ರಕಲಾ ಶಿಬಿರಕ್ಕೆ ಮಂಗಳವಾರ ಮೂಡುಬಿದಿರೆ ಶ್ರೀ ಜೈನ ಮಠದ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಚಾಲನೆ ನೀಡಿದರು.

ಡಾ। ವಿ. ಎಸ್. ಆಚಾರ್ಯ ಸಭಾಭವನದಲ್ಲಿ ಮಂಗಳವಾರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಸಂಘರ್ಷ ಸಹಜ. ಸಂಘರ್ಷವನ್ನು ದೂರ ಮಾಡುವ ಶಕ್ತಿ ಕಲೆಯಲ್ಲಿದೆ. ತನ್ಮೂಲಕ ಸಾಮಾಜಿಕ ಸಾಮರಸ್ಯ ವೃದ್ಧಿಸಿರುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಅವರು ವಿವಿಧ ರಾಜ್ಯಗಳಿಂದ ಆಗಮಿಸಿದ ಕಲಾವಿದರಿಗೆ ಕುಂಚ ಪರಿಕರಗಳನ್ನು ನೀಡಿ ಸ್ವಾಗತಿಸಿದರು.

ಕಲೆಯನ್ನು ಉಳಿಸಿ, ಬೆಳೆಸುವ ಕೆಲಸವನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಆಳ್ವಾಸ್ ವಿರಾಸತ್ ಮೂಲಕ ಕಳೆದ 24 ವರ್ಷಗಳಿಂದ ಮಾಡುತ್ತ ಬಂದಿದೆ. ಕಳೆದ 10 ವರ್ಷದಿಂದ ಆಳ್ವಾಸ್ ವರ್ಣವಿರಾಸತ್, ಶಿಲ್ಪ ವಿರಾಸತ್ ಮೂಲಕ ಚಿತ್ರ ಹಾಗೂ ಶಿಲ್ಪಕಲಾವಿದರಿಗೆ ಮನ್ನಣೆ ನೀಡುತ್ತಿದೆ. ಕಲಾವಿದರಿಂದ ರಚಿತವಾದ 6 ಸಾವಿರದ ಹೆಚ್ಚು ಕಲಾಕೃತಿಗಳನ್ನು ಕ್ಯಾಂಪಸ್‌ನಲ್ಲೇ ಸಂರಕ್ಷಿಸಲಾಗಿದೆ. ಈ ಕಲಾಕೃತಿಗಳನ್ನು ಸೂಕ್ಷ್ಮವಾಗಿ ಗಮನಿಸಿ, ಪ್ರಜ್ಞಾವಂತ ಮನಸ್ಸನ್ನು ಕಟ್ಟಿಕೊಳ್ಳುವ ಅವಕಾಶ ವಿದ್ಯಾರ್ಥಿಗಳು ಹಾಗೂ ವೀಕ್ಷಕರಿಗಿಲ್ಲಿದೆ ಎಂದು ತಿಳಿಸಿದರು.

ಕಾಷ್ಠ ಕಲಾವಿದ ರಾಮಮೂರ್ತಿ, ಟೆರಕೋಟಾ ಕಲಾವಿದ ಉಲ್ಲಾಸ್ ಕರ್ದೆ, ಶಿಬಿರ ಸಲಹಾ ಸಮಿತಿಯ ಕೋಟಿ ಪ್ರಸಾದ್ ಆಳ್ವ ಗಣೇಶ್ ಸೋಮಯಾಜಿ, ಆಳ್ವಾಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ। ಕುರಿಯನ್, ಪ.ಪೂ. ಕಾಲೇಜಿನ ಪ್ರಾಂಶುಪಾಲ ಪ್ರೊ। ರಮೇಶ್ ಶೆಟ್ಟಿ ಉಪಸ್ಥಿತರಿದ್ದರು.

ದೀಕ್ಷಾ ಗೌಡ ಕಾರ್ಯಕ್ರಮ ನಿರೂಪಿಸಿದರು.

## ವರ್ಣ ವಿರಾಸತ್ ಪ್ರಶಸ್ತಿ

ವಿದ್ಯಾಗಿರಿಯಲ್ಲಿ ಡಿ. 22ರಿಂದ ಆರಂಭವಾಗಿರುವ ಆಳ್ವಾಸ್ ಶಿಲ್ಪ ವಿರಾಸತ್ ಶಿಬಿರವು ಜ. 6ರ ವರೆಗೆ ಬೆಳಗ್ಗೆ 9ರಿಂದ ಸಂಜೆ 6ರ ವರೆಗೆ ನಡೆಯಲಿದೆ. ಕಲಾವಿದ ಸೂರ್ಯಪ್ರಕಾಶ್ ಅವರಿಗೆ ಈ ಬಾರಿಯ ಆಳ್ವಾಸ್ ವರ್ಣ ವಿರಾಸತ್ ಪ್ರಶಸ್ತಿ ನೀಡಿ ಗೌರವಿಸಲಾಗುವುದು. 6ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

# ಆಳ್ವಾಸ್ ವಿರಾಸತ್ ರಾಷ್ಟ್ರೀಯ ಉತ್ಸವ ಸಂಪನ್ನ

ಸುಧಾಕರ್ ಏರ್ಮಾಳ್



ಆಳ್ವಾಸ್ ವಿರಾಸತ್‌ನ ಮೂರನೇ ದಿನದ ಕಾರ್ಯಕ್ರಮದಲ್ಲಿ ಖ್ಯಾತ ಹಿನ್ನೆಲೆ ಗಾಯಕ ಶಂಕರ್ ಮಹಾದೇವನ್ ಹಾಡುಗಾರಿಕೆ.




ಶಂಕರ್. ಸಿದ್ಧಾರ್ಥ್, ಶಿವಂ ಮಯ ವಿರಾಸತ್...

■ **ಸುಶೀಲೇಂದ್ರ ಕುಡುಪಾಡಿ** ಮೂಡುಬಿದಿರೆ

ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವತಿಯಿಂದ ಆಯೋಜಿಸಲಾದ 25ನೇ ಆಳ್ವಾಸ್ ವಿರಾಸತ್ ರಾಷ್ಟ್ರೀಯ ಉತ್ಸವ ಪುತ್ತಿಗೆ ವಿವೇಕಾನಂದ ನಗರದ ಶ್ರೀಮತಿ ವನಜಾಕ್ಷಿ ಕೆ. ಶ್ರೀಪತಿ ಭಟ್ ವೇದಿಕೆಯಲ್ಲಿ ಭಾನುವಾರ ಸಂಪನ್ನಗೊಂಡಿತು.

ಚಿತ್ರ ರಸ ಸಂಜೆ ಶಿರೋನಾಮೆಯಲ್ಲಿ ಆಳ್ವಾಸ್ ವಿರಾಸತ್‌ನ ಮೂರನೇ ದಿನದ ಕಾರ್ಯಕ್ರಮದಲ್ಲಿ ವೇದಿಕೆಯನ್ನೇರಿದವರು ಖ್ಯಾತ ಹಿನ್ನೆಲೆ ಗಾಯಕ ಶಂಕರ್ ಮಹಾದೇವನ್.

ಗಣನಾಥಯಾ... ಗಣಾಧ್ಯಕ್ಷಾಯ ಎನ್ನುತ್ತಾ ಎರಡು ಕೈಗಳನ್ನು ಅರಳಿಸುತ್ತಾ ನೆರೆದ ಪ್ರೇಕ್ಷಕರಿಗೆ ಬಾಗಿ ನಮಸ್ಕರಿಸಿದ ಗಾಯಕ ಶಂಕರ್ ಮಹಾದೇವನ್ ಮುಂದೆ ಎರಡು ಗಂಟೆಗಳ ಕಾಲ ಮಾಡಿದ್ದು ಸ್ವರ ಮಾಂತ್ರಿಕ ಲೋಕದ ಜಾದೂ... ದೇವರ ನಾಮದೊಂದಿಗೆ ಸಂಗೀತ ಪಯಣ ಆರಂಭಿಸಿದ ಶಂಕರ್ ಮಹಾದೇವನ್, ದ್ವಿತೀಯ ಗೀತೆ ದೇಶಕ್ಕಾಗಿ ಸಮರ್ಪಿಸಿದರು. ಲಕ್ಷ್ಯ ಚಿತ್ರದ 'ಯಹಿ ರಾಸ್ತಾ...' ಹಾಡಿನ ಮೂಲಕ ಭಾರತ್ ಮಾತಾ ಕಿ ಜೈ ಎಂದರು.

ಮುಂದೆ ಪ್ರೇಕ್ಷಕರನ್ನೂ ತನ್ನ ಹಾಡಿನೊಂದಿಗೆ ಕೋರಸ್ ಹಾಕಿಸುತ್ತಾ ಶಂಕರ್ ಮಹಾದೇವನ್ ತನ್ನ ಅಪೂರ್ವ ಬ್ರೆಥ್‌ಲೆಸ್, ರಾಕಿಂಗ್, ಮೆಲೋಡಿಯಸ್ ಹಾಡು ಹಾಡಿ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು.

2019ರ ಪ್ರಥಮ ಸ್ಟೇಜ್ ಶೋ ಎನ್ನುತ್ತಾ ಶಂಕರ್ ಮಹಾದೇವನ್ ತನ್ನ ಕೆರಿಯರ್‌ನ ಆರಂಭದ ರಾಕಿಂಗ್ ಹಾಡು 'ದಿಲ್ ಚಾಹ್ತಾ ಹೇ...' ಹಾಡನ್ನು ಸಹಗಾಯಕರಾದ ರಮಣ್ ಮತ್ತು ರಸಿಕಾ ಚಂದ್ರಶೇಖರ್ ಅವರೊಂದಿಗೆ ಪ್ರಸ್ತುತ ಪಡಿಸಿದರು.

ಎರಡು ಮೂರು ಹಾಡಿನ ಬಳಿಕ ಶಂಕರ್ ಮಹಾದೇವನ್‌ಗೆ ಜತೆಯಾದವರು ಪುತ್ರ ಶಿವಂ ಮಹಾದೇವನ್. ಅಪ್ಪನಿಗಿಂತ ತಾನೇನೂ ಕಮ್ಮಿಯಲ್ಲ ಎಂಬಂತೆ ಡ್ಯಾನ್ಸಿಂಗ್ ನಂಬರ್ ಹಾಡುತ್ತಾ ವಿರಾಸತ್‌ನ ಸ್ವರಲೋಕಕ್ಕೆ ಕಾಣ್ಕೆ ನೀಡಿದರು.



ಹೈದರಾಬಾದ್‌ನ ಹಿರಿಯ ಕಲಾವಿದ ಸೂರ್ಯಪ್ರಕಾಶ್ ಅವರಿಗೆ ಆಳ್ವಾಸ್ ವರ್ಣ ವಿರಾಸತ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಪ್ಪನೊಂದಿಗೆ ಮಗ ಕುಣಿಯುತ್ತಾ ಮಗನಿಗೆ ಪ್ರೋತ್ಸಾಹ ನೀಡಲೆಂಬಂತೆ ಅಪ್ಪ ಕುಣಿಯುತ್ತಾ ತಂದೆ ಮಗನ ಜೋಡಿ ಹಳೆಯ ಕಿಶೋರ್ ಕುಮಾರ್‌ನ. ಹಾಡಿನಿಂದ ಮೊದಲ್ಗೊಂಡು ಟು ಸ್ಟೇಟ್ಸ್, ವಿಸ್ರಾ, ಭಾಗ್ ಮಿಲ್ಕಾ ಭಾಗ್, ದಡಕ್ ಚಿತ್ರದ ಹಾಡನ್ನು ಹಾಡಿ ಆಳ್ವಾಸ್‌ನ ಯುವ ಸಮುದಾಯವನ್ನು ಕುಣಿಸಿದರು.

ಸಾರಥಿ ಚಿತ್ರದ ಕನ್ನಡ ಹಾಡು 'ಅತಿರಥ ಮಹಾರಥ ಸಾರಥಿ...' ಹಾಡು ಹಾಡಿದಾಗ ಪ್ರೇಕ್ಷಕರಿಂದ ಭಾರಿ ಕರತಾಡನ. ಹಾಡಿನ ಕೊನೆಯಲ್ಲಿ ಪಕ್ಕವಾದ್ಯ ಕಲಾವಿದರೊಂದಿಗೆ ತನಿಯಾವರ್ತನ ಅಬ್ಬರದ ಸಂಗೀತದ ನಡುವೆ ನಾದ ತನ್ಮಯತೆ ಮೂಡಿಸಿತು. ಶಂಕರ್ ಮಹಾದೇವನ್ ಮೌಖಿಕವಾಗಿ ತಾಳ ಹಾಕಿದರೆ ಕಾಂಗೋ, ಡೋಲ್, ಡೋಲಕ್, ಡ್ರಮ್ಸ್ ಕಲಾವಿದರು ಅದನ್ನು ತಮ್ಮ ವಾದನದಲ್ಲಿ ಸ್ವರ ಮಾಧುರ್ಯ ಮೂಡಿಸಿ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿಕೊಂಡರು.

ಬಳಿಕ ಶಂಕರ್ ಮಹಾದೇವನ್ ವೇದಿಕೆ ಬಿಟ್ಟುಕೊಟ್ಟದ್ದು ತನ್ನ ಹಿರಿಯ ಪುತ್ರ ಸಿದ್ಧಾರ್ಥ್ ಮಹಾದೇವನ್‌ಗೆ. ವೇದಿಕೆಯೇರಿದ ಸಿದ್ಧಾರ್ಥ್ ಪ್ರೇಕ್ಷಕರ ನಿರೀಕ್ಷೆ ಹುಸಿಗೊಳಿಸಲಿಲ್ಲ, ಭಾಗ್ ಮಿಲ್ಕಾ ಭಾಗ್ ಚಿತ್ರದ 'ಜಿಂದಾ... ' ಹಾಡಿನೊಂದಿಗೆ ಎಂಟ್ರಿ ಕೊಟ್ಟ ಸಿದ್ಧಾರ್ಥ್, ಸಿನಿಮಾಕ್ಕೆ ತಾನೇ ಹಿನ್ನೆಲೆ ಗಾಯಕನಾಗಿ ಹಾಡಿದ ' ಜಿಂದಾ..' ದಿಲ್ ದಡಕ್ ನೆ ದೋ ಚಿತ್ರದ 'ಕ್ಯಾ ದಿಲ್ ಕಿ ಸುನ್ಲೀ.. ಹಾಡನ್ನು ಹಾಡಿದರು.

ಬಹುಮುಖ ಪ್ರತಿಭೆ ರಸಿಕಾ ಚಂದ್ರಶೇಖರ್ ಕೊಳಲಿನೊಂದಿಗೆ ವೇದಿಕೆಯೇರಿ ಶಂಕರ್ ಮಹಾದೇವನ್ ನುಡಿಸಿದ ಮೌಖಿಕ ತಾಳ ಹಾಕಿದ್ದನ್ನು ಯಥಾವತ್ತಾಗಿ ಕೊಳಲಿನಲ್ಲಿ ನಾದ ಮಾಧುರ್ಯ ಮೂಡಿಸಿ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿಕೊಂಡರು. ತಾರೆ ಜಮೀನ್ ಪರ್ ಚಿತ್ರಕ್ಕೆ ಹಿನ್ನೆಲೆ ಗಾಯನ ನೀಡಿದ ರಮಣ್, ಅದೇ ಹಾಡು ' ತೂ ಧೂಪ್ ಹೆ..' ಹಾಡು ಹಾಡಿದರು.

ಶಂಕರ್, ಸಿದ್ಧಾರ್ಥ್, ಶಿವಂ, ರಮಣ್, ರಸಿಕ ಜತೆಯಾಗಿ ಹಾಡಿದ ದಿಲ್ ಚಾಹ್ತಾ ಹೈ ಚಿತ್ರದ 'ಕೋಯಿ ಕಹೇ.. ಹಮ್ಕೋ ದಿವಾನ...', ಬಂಟಿ ಔರ್ ಬಬ್ಲಿ ಚಿತ್ರದ 'ಕಜ್‌ರಾರೆ...' , ಭಾಗ್ ಮಿಲ್ಕಾ ಭಾಗ್ ಚಿತ್ರದ 'ಹವನ್ ಕರೇಂಗೆ...' ಹಾಡು ವಿರಾಸತ್‌ನ ಮೂಡ್‌ನ್ನು ಎತ್ತರಕ್ಕೇರಿಸಿತು. ಕೊನೆಯದಾಗಿ ತನ್ನ ಅಪೂರ್ವವಾದ ಬ್ರೆಥ್‌ಲೆಸ್ ಹಾಡು 'ಯಿ ಜೋ ಮಿಲಾತೋ...' ಹಾಗೂ ಸೆನುರೀಟಾ ಹಾಡು ಹಾಡಿ ಸೈನ್ ಆಫ್ ಮಾಡಿದರು.

**ದೀಪ ಪ್ರಜ್ವಲನ:** ಮಾಜಿ ಸಚಿವ ಕೃಷ್ಣ ಪಾಲೆಮಾರ್, ಉದ್ಯಮಿ ಉದಯ ಶೆಟ್ಟಿ, ಜ್ಞಾನದೀಪ ಟ್ರಸ್ಟ್‌ನ ಸುಧಾಕರ ಶೆಟ್ಟಿ, ರಾಮಚಂದ್ರ ಶೆಟ್ಟಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ದೀಪ ಪ್ರಜ್ವಲನ ಮಾಡಿದರು. ಸಲಹಾ ಸಮಿತಿ ಸದಸ್ಯರಾದ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಪುರುಷೋತ್ತಮ ಅಡ್ವೆ ಉಪಸ್ಥಿತರಿದ್ದರು.











# ALVA'S VIRASAT CONCLUDES

Popular singer Shankar Mahadevan performs at Alva's Virasat, a cultural festival, in Moodbidri near Mangaluru on Sunday; Hyderabad-based painter Suryaprakash being conferred 'Varna Virasat' award on the final day of the three-day Alva's Virasat | EXPRESS

### ಮಹಾದೇವನ್ ತ್ರಯರಿಂದ ಗಾನ ರಸಧಾರೆ | ಮನಸೂರೆಗೈದ ಚಿತ್ರ ರಸಸಂಜೆ

# ಆಳ್ವಾಸ್ ವಿರಾಸತ್‌ಗೆ ವರ್ಣರಂಜಿತ ತೆರೆ

■ ವಿಜಯವಾಣಿ ಸುದ್ದಿಜಾಲ ಮೂಡುಬಿದಿರೆ

ಆಳ್ವಾಸ್ ವಿರಾಸತ್ ಬೆಳ್ಳಿಹಬ್ಬ ಸಂಭ್ರಮ ಭಾನುವಾರ ವರ್ಣಮಯ ತೆರೆಕಂಡಿತು.



ಕೊನೆಯ ದಿನವಾದ ಭಾನುವಾರ ಖ್ಯಾತ ಹಿನ್ನೆಲೆ ಗಾಯಕ ಶಂಕರ್ ಮಹಾದೇವನ್, ಅವರ ಪುತ್ರರಾದ ಸಿದ್ಧಾರ್ಥ್ ಮಹಾದೇವನ್, ಶಿವ ಮಹಾದೇವನ್ ಸುಮಾರು ಎರಡು ಗಂಟೆಗಳ ಕಾಲ ನಡೆಸಿಕೊಟ್ಟ 'ಚಿತ್ರ ರಸಸಂಜೆ' ಪ್ರೇಕ್ಷಕರ ಮನಸೂರೆಗೊಂಡಿತು.

ಕೈ ಮುಗಿದು ಏರು ಕನ್ನಡದ ತೇರು ಕನ್ನಡ ಹಾಡು ಸಹಿತ ಶಂಕರ್ ಮಹಾದೇವನ್, ಏಕದಂತಾಯ ವಕ್ರತುಂಡಾಯ, ದಿಲ್ ಚಾಹತಾ ಹೇ, ಮೈನೆ ಜಿಸೇ ಅಭಿ ಅಭಿ ದೇಕಾ ಹೇ, ತೇರೇ ರಂಗ್ ರಂಗ್, ಇಟ್ಸ್ ಟೈಮ್ ಟು ಡಿಸ್ಕೊ, ಹರ್ ಗಡಿ, ಸಲಾಮೇ ಇಷ್ಕ್, ಮೇರಿ ಮಾ ಸಹಿತ ತಾವು ಧ್ವನಿ ನೀಡಿದ ಸಿನಿಮಾದ ಹಾಡು ಹಾಡಿದರು.

ಹಿರಿಯ ಪುತ್ರ ಸಿದ್ಧಾರ್ಥ ಮಹಾದೇವನ್ ಜಿಂದಾ, ಭಾಗ್ ಮಿಲ್ಕಾ ಭಾಗ್ ಹಾಡುಗಳನ್ನು ಪ್ರಸ್ತುತಪಡಿಸಿದರು. ಎರಡನೇ ಮಗ ಶಿವ ಮಹಾದೇವನ್ ಮನ್ ಮಸ್ತ್ ಮಗನ್, ತೇರೆ ನೈನಾ, ಮೈನೆ ತೆನು ಸಮ್ಝಾವನ್, ಬಾಬು ಸಮ್ಝೆ ಇಶಾರೇ ಹಾಡಿದರು. ಶಂಕರ್ ಮಹಾದೇವನ್‌ಗೆ ಇಡೀ ಕಾರ್ಯಕ್ರಮದಲ್ಲಿ ಸಾಥ್ ನೀಡಿದ ಗಾಯಕ ರಮಣ್, ಖೋಲೋ ದರ್ವಾಜಾ, ರಸಿಕ ಚಂದ್ರಶೇಖರ್ ಹಾಡಿನ ಜತೆ ಕೊಳಲು ವಾದನ ಪ್ರೇಕ್ಷಕರನ್ನು ರಂಜಿಸಿತು.

## ಕಲಾವಿದರಲ್ಲಿ ಅಡಗಿದೆ ಅಭಿವ್ಯಕ್ತಿಯ ಶಕ್ತಿ

ಕಲಾವಿದರಲ್ಲಿ ಅಭಿವ್ಯಕ್ತಿಯ ಶಕ್ತಿಯಿದೆ. ಸಮಾಜದ ಪ್ರಗತಿಯ ಹಾದಿಯಲ್ಲಿ ಉತ್ತಮ ಅಂಶಗಳ ಸಾರವನ್ನು ಕಲಾವಿದರು ಸ್ವೀಕರಿಸಿ ಸತ್ಫಲಗಳನ್ನು ಪ್ರತಿಫಲವಾಗಿ ಸಮಾಜಕ್ಕೆ ನೀಡುವವ ರಾಗಬೇಕು ಎಂದು ಜೈನ ಮಠದ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಹೇಳಿದರು.

> **ಶಿಕ್ಷಣದ ಚೌಕಟ್ಟಿನಿಂದ ಹೊರಗುಳಿದರೂ ಕಲಾವಿದರಾಗಿ ಅರ್ಪಣಾ ಮನೋಭಾವದಿಂದ ಸಾಧನೆ ಮಾಡಿದವರು ಎಳೆಯರಿಗೆ ಸ್ಫೂರ್ತಿಯಾಗಬೇಕು.**
>
> | ಡಾ.ಎಂ.ಮೋಹನ ಆಳ್ವ
> ಆಳ್ವಾಸ್ ವರ್ಣ ವಿರಾಸತ್ ಸಂಘಟಕ

ವರ್ಣ ವಿರಾಸತ್ ಹಾಗೂ ಶಿಲ್ಪವಿರಾಸತ್ ಸಮಾರೋಪದಲ್ಲಿ ಆಶೀರ್ವಚನ ನೀಡಿದರು. ರಾಜ್ಯ ಕ್ರಾಫ್ಟ್ ಕೌನ್ಸಿಲ್ ಕಾರ್ಯದರ್ಶಿ ಎಂ.ಎಸ್. ಫಾರೂಕ್ ಇತಿಹಾಸವಾಗುತ್ತಿದ್ದ ಸಾಂಪ್ರದಾಯಿಕ ಕಲೆಗಳ ಮೌಲಿಕತೆ ಅರಿತು ಕೊಳ್ಳಬೇಕು ಎಂದರು. ಹೈದರಾಬಾದ್‌ನ ಕಲಾವಿದ ಸೂರ್ಯಪ್ರಕಾಶ್ ಅವರಿಗೆ ವರ್ಣ ವಿರಾಸತ್ ಪ್ರಶಸ್ತಿ ನೀಡಲಾಯಿತು. ಕಲಾವಿದ ಶಶಿಧರ್, ಸಂಘಟಕ ಡಾ.ಎಂ.ಮೋಹನ ಆಳ್ವ ಮಾತನಾಡಿದರು. ಕಲಾವಿದ ಡಾ.ಅಖ್ತರ್ ಹುಸೇನ್, ಶಿಬಿರದ ಸಲಹಾ ಸಮಿತಿಯ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಪುರುಷೋತ್ತಮ ಅಡ್ವೆ ಉಪಸ್ಥಿತರಿದ್ದರು. ವರ್ಣವಿರಾಸತ್‌ನ 10, ಶಿಲ್ಪ ವಿರಾಸತ್‌ನಲ್ಲಿ ಪಾಲ್ಗೊಂಡ 31 ಕಲಾವಿದರನ್ನು ಗೌರವಿಸಲಾಯಿತು.

ವಿಜಯವಾಣಿ ಚಿತ್ರ



ಆಳ್ವಾಸ್ ವರ್ಣವಿರಾಸತ್ ಸಮಾರೋಪದಲ್ಲಿ ಹೈದರಾಬಾದ್‌ನ ಚಿತ್ರಕಲಾವಿದ ಸೂರ್ಯಪ್ರಕಾಶ್ ಅವರಿಗೆ ಭಾನುವಾರ ವರ್ಣವಿರಾಸತ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ. ಮೋಹನ ಆಳ್ವ, ಮಾಜಿ ಸಚಿವ ಕೃಷ್ಣ ಪಾಲೇಮಾರ್ ಇದ್ದರು.

ಸಂಯುಕ್ತ ಕರ್ನಾಟಕ
ಸೋಮವಾರ | 07 ಜನವರಿ, 2019







ಆಳ್ವಾಸ್ ವಿರಾಸತ್‌ನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆಕರ್ಷಕ ಒಡಿಸ್ಸಿ, ಕೂಚುಪುಡಿ, ಬಂಜಾರ ನೃತ್ಯ

# ವಿರಾಸತ್‌ನಲ್ಲಿ ಮೇಳೈಸಿದ ನೃತ್ಯ ಸೊಬಗು

**ಸಂ.ಕ. ಸಮಾಚಾರ, ಮೂಡುಬಿದಿರೆ**

- ಆಕರ್ಷಕ ಒಡಿಸ್ಸಿ ನೃತ್ಯ, ಕೂಚುಪುಡಿ, ಬಂಜಾರ ನೃತ್ಯ
- ಆಳ್ವಾಸ್ ವಿದ್ಯಾರ್ಥಿ ಕಲಾ ತಂಡದಿಂದ ನೃತ್ಯ ಪ್ರಸ್ತುತ

ಆಳ್ವಾಸ್ ವಿರಾಸತ್‌ನ ಶನಿವಾರದಂದು ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಧುಲಿತ ಮೊಹಪಾತ್ರ ನಿರ್ದೇಶನದಲ್ಲಿ ಬೆಂಗಳೂರಿನ ನೃತ್ಯಾಂತರ್ ಅಕಾಡೆಮಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್ ಕಲಾವಿದರಿಂದ ಒಡಿಸ್ಸಿ ನೃತ್ಯ, ಮೂರನೇ ಕಾರ್ಯಕ್ರಮವಾಗಿ ಕಲೈಮಾಮಣಿ ಶೈಲಜಾ ಅವರ ನಿರ್ದೇಶನದಲ್ಲಿ ಚೆನ್ನೈನ ಶೈಲಸುಧಾ ಅಕಾಡೆಮಿ ವತಿಯಿಂದ ಕೂಚುಪುಡಿ ನೃತ್ಯ ಹಾಗೂ ಆಳ್ವಾಸ್ ವಿದ್ಯಾರ್ಥಿಗಳ ಕಲಾ ತಂಡದಿಂದ ಆಂಧ್ರದ ಬಂಜಾರ ನೃತ್ಯ, ಮಣಿಪುರದ ಸ್ಟಿಕ್ ಡ್ಯಾನ್ಸ್, ಶ್ರೀಲಂಕಾದ ಕ್ಯಾಂಡಿಯನ್ ನೃತ್ಯ ಹಾಗೂ ಕಥಕ್ ನೃತ್ಯ–ಋತು ಸಂಭ್ರಮವು ಮನಸೂರೆಗೊಂಡಿತು. ಲಸುಧಾ ಅಕಾಡೆಮಿ ವತಿಯಿಂದ ಕೂಚುಪುಡಿ ನೃತ್ಯ ಪ್ರಸ್ತುತಗೊಂಡಿತು.

# ಪ್ರಶಸ್ತಿ ಪ್ರದಾನ ಸಂಭ್ರಮ

ಆಳ್ವಾಸ್ ವಿರಾಸತ್–2019ಕ್ಕೆ ಪೂರಕವಾಗಿ ನಡೆದ ವಿವಿಧ ರಾಜ್ಯಗಳ ಸಮಕಾಲೀನ ಚಿತ್ರ ಕಲಾವಿದರ ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರ, ಆಳ್ವಾಸ್ ವರ್ಣ ವಿರಾಸತ್ ಭಾನುವಾರ ಸಂಪನ್ನಗೊಂಡಿದ್ದು, ಈ ಬಾರಿ ಹೈದರಾಬಾದಿನ ಹಿರಿಯ ಚಿತ್ರ ಕಲಾವಿದ ಸೂರ್ಯ ಪ್ರಕಾಶ್ ಅವರಿಗೆ 2019ನೇ ಸಾಲಿನ ರಾಷ್ಟ್ರಮಟ್ಟದ ಆಳ್ವಾಸ್ ವರ್ಣ ವಿರಾಸತ್ ಪ್ರಶಸ್ತಿಯನ್ನು ಪುತ್ತಿಗೆ ವಿವೇಕಾನಂದ ನಗರದ ವಿರಾಸತ್ ವೇದಿಕೆಯಲ್ಲಿ ಸಾಯಂಕಾಲ ಪ್ರದಾನ ಮಾಡಲಾಯಿತು.

ಮಾಜಿ ಸಚಿವ ಕೃಷ್ಣ ಜೆ.ಪಾಲೆಮಾರ್, ರಾಮಚಂದ್ರ ಶೆಟ್ಟಿ ಜ್ಞಾನ ಸುಧಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಧಾಕರ ಶೆಟ್ಟಿ, ಉದ್ಯಮಿ ಉದಯ ಶೆಟ್ಟಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ, ಮತ್ತಿತರರು ಉಪಸ್ಥಿತರಿದ್ದರು.



ಹಿರಿಯ ಚಿತ್ರಕಲಾವಿದ ಸೂರ್ಯಪ್ರಕಾಶ್ ಅವರಿಗೆ 2019ನೇ ಸಾಲಿನ ರಾಷ್ಟ್ರಮಟ್ಟದ ಆಳ್ವಾಸ್ ವರ್ಣ ವಿರಾಸತ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಯುಕ್ತ ಕರ್ನಾಟಕ
ಭಾನುವಾರ | 23 ಡಿಸೆಂಬರ್, 2018

# ಶಿಲ್ಪಿಯಲ್ಲಿ ದೃಢವಾದ ಆತ್ಮವಿಶ್ವಾಸ ಅವಶ್ಯ

**ಸಂ.ಕ. ಸಮಾಚಾರ, ವಿದ್ಯಾಗಿರಿ**

ಪ್ರತಿಯೊಬ್ಬ ವ್ಯಕ್ತಿಯಲ್ಲೂ ವಿಭಿನ್ನ ರೀತಿಯ ಕಲೆಗಳಿರುತ್ತವೆ. ಅದನ್ನು ಪ್ರದರ್ಶಿಸಲು ಆಸಕ್ತಿ ಮತ್ತು ಅವಕಾಶ ತುಂಬಾ ಮುಖ್ಯ. ಆಸಕ್ತಿ ಎನ್ನುವುದು ಸತತ ಪ್ರಯತ್ನದಿಂದ ಹುಟ್ಟಿಕೊಂಡರೆ ಅವಕಾಶ ಕಲೆಗಾರನನ್ನು ಅರಸುತ್ತಾ ಬರುತ್ತದೆ ಎಂದು ಬೆಂಗಳೂರಿನ ಹಿರಿಯ ಶಿಲ್ಪಕರ್ಮಿ ಸೂರಾಲು ವೆಂಕಟರಮಣ ಭಟ್ ತಿಳಿಸಿದರು

ಆಳ್ವಾಸ್ ವಿರಾಸತ್ 2018ರ ಅಂಗವಾಗಿ ನಡೆಯುತ್ತಿರುವ ಆಳ್ವಾಸ್ ಶಿಲ್ಪ ವಿರಾಸತ್‌ನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾದರೆ ಶಿಲ್ಪಕಲೆಯು ಅಗತ್ಯವಾಗಿದೆ. ಆದ್ದರಿಂದ ಇದಕ್ಕೆ ಯಾವತ್ತೂ ಬೇಡಿಕೆ ಕಡಿಮೆಯಾಗುವುದಿಲ್ಲ. ದೇವರು ದೇವಸ್ಥಾನಗಳಲ್ಲದೆ ಇನ್ನೂ ವಿಭಿನ್ನ ಶೈಲಿಯ ಶಿಲ್ಪಕಲೆಗಳಿವೆ. ಇದೆಲ್ಲವನ್ನೂ ಜನ-ರಿಗೆ ಪರಿಚಯಿಸುವ ಪ್ರಯತ್ನವಾಗಬೇಕಿದೆ. ಒಂದು ಶಿಲ್ಪವನ್ನು ಆರಂಭಿಸುವ ಮೊದಲು ಶಿಲ್ಪಿಯಲ್ಲೇ ದೃಢವಾದ ಆತ್ಮವಿಶ್ವಾಸ ಜೊತೆಗೆ ಸತತ ಪರಿಶ್ರಮವಿರಬೇಕು ಆಗ ಮಾತ್ರ ಶಿಲ್ಪಕ್ಕೆ ಒಂದು ಒಳ್ಳೆಯ ರೂಪ, ಬೆಲೆ ಬರಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಕಲೆಗಾರನಿಗೆ ಅವಕಾಶಗಳು ತುಂಬಾ ಇದೆ. ಸ್ವಂತಿಕೆ ಮತ್ತು ಕ್ರಿಯಾಶೀಲತೆ ಬಳಸಿ ವಿಭಿನ್ನ ಶೈಲಿಯ ಹೊಸತನ ರೂಪಿಸಿದರೆ ಖಂಡಿತ ಈ ಕಲೆಯಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು.

ಶಿಲ್ಪ ವಿರಾಸತ್‌ನಲ್ಲಿ ಪಾಲ್ಗೊಳ್ಳಲು ಕರ್ನಾಟಕ ಮಾತ್ರವಲ್ಲದೇ ದೂರದ ಛತ್ತೀಸ್‌ಘರ್, ಕೇರಳದಿಂದಲೂ ಶಿಲ್ಪಿಗಳು ಬಂದಿರುವುದು ವಿಶೇಷ. ಒಟ್ಟು 31 ಶಿಲ್ಪಿಗಳು ಈ ಬಾರಿಯ ಶಿಲ್ಪವಿರಾಸತ್‌ನಲ್ಲಿ ಭಾಗವಹಿಸುತ್ತಿದ್ದಾರೆ.

ಶಿಲ್ಪ ವಿರಾಸತ್ ಸಲಹಾ ಸಮಿತಿ ಸದಸ್ಯರಾದ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಪುರುಷೋತ್ತಮ ಅಡ್ವೆ ಉಪಸ್ಥಿತರಿದ್ದರು. ದೀಕ್ಷಾ ಗೌಡ ನಿರೂಪಿಸಿದರು

ಹೊಸ ದಿಗಂತ
ಭಾನುವಾರ, 23 ಡಿಸೆಂಬರ್ 2018, ಮಂಗಳೂರು

ಆಳ್ವಾಸ್ ಶಿಲ್ಪ ವಿರಾಸತ್‌ಗೆ ಸಂಭ್ರಮದ ಚಾಲನೆ | ಹಿರಿಯ ಶಿಲ್ಪಕರ್ಮಿ ಸೂರಾಲು ಆಶಯ

# ಶಿಲ್ಪಕಲೆ ಪರಿಶ್ರಮ ಬಯಸುವ ಕ್ಷೇತ್ರ

• ದಿಗಂತ ವರದಿ, ವಿದ್ಯಾಗಿರಿ

ಪ್ರತಿಯೊಬ್ಬ ವ್ಯಕ್ತಿಯಲ್ಲೂ ವಿಭಿನ್ನ ರೀತಿಯ ಕಲೆಗಳಿರುತ್ತವೆ. ಅದನ್ನು ಪ್ರದರ್ಶಿಸಲು ಆಸಕ್ತಿ ಮತ್ತು ಅವಕಾಶ ತುಂಬಾ ಮುಖ್ಯ. ಆಸಕ್ತಿ ಎನ್ನುವುದು ಸತತ ಪ್ರಯತ್ನದಿಂದ ಹುಟ್ಟಿಕೊಂಡರೇ, ಅವಕಾಶ ಕಲೆಗಾರನನ್ನು ಅರಸುತ್ತಾ ಬರುತ್ತದೆ ಎಂದು ಬೆಂಗಳೂರಿನ ಹಿರಿಯ ಶಿಲ್ಪಕರ್ಮಿ ಸೂರಾಲು ವೆಂಕಟರಮಣ ಭಟ್ ತಿಳಿಸಿದರು

ಆಳ್ವಾಸ್ ವಿರಾಸತ್ 2018ರ ಅಂಗವಾಗಿ ನಡೆಯುತ್ತಿರುವ 'ಆಳ್ವಾಸ್ ಶಿಲ್ಪ ವಿರಾಸತ್?ನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾದರೆ ಶಿಲ್ಪಕಲೆಯು ಅಗತ್ಯವಾಗಿದೆ. ಆದ್ದರಿಂದ ಇದಕ್ಕೆ ಯಾವತ್ತೂ ಬೇಡಿಕೆ ಕಡಿಮೆಯಾಗುವುದಿಲ್ಲ, ದೇವರು ದೇವಸ್ಥಾನಗಳಲ್ಲದೆ ಇನ್ನೂ ವಿಭಿನ್ನ ಶೈಲಿಯ ಶಿಲ್ಪಕಲೆಗಳಿವೆ. ಇದೆಲ್ಲವನ್ನೂ ಜನರಿಗೆ ಪರಿಚಯಿಸುವ ಪ್ರಯತ್ನವಾಗಬೇಕಿದೆ. ಶಿಲ್ಪಕಲೆ ಸಮರ್ಪಣಾ ಮನೋಭಾವ ಹಾಗೂ ನಿರಂತರ ಪರಿಶ್ರಮವನ್ನು ಬೇಡುವ ಕ್ಷೇತ್ರ. ಒಂದು ಶಿಲ್ಪವನ್ನು ಆರಂಭಿಸುವ ಮೊದಲು ಶಿಲ್ಪಿಯಲ್ಲೇ ದೃಢವಾದ ಆತ್ಮವಿಶ್ವಾಸ ಜೊತೆಗೆ ಸತತ ಪರಿಶ್ರಮವಿರಬೇಕು ಆಗ ಮಾತ್ರ ಶಿಲ್ಪಕ್ಕೆ ಒಂದು ಒಳ್ಳೆಯ ರೂಪ, ಬೆಲೆ ಬರಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಕಲೆಗಾರನಿಗೆ ಅವಕಾಶಗಳು ತುಂಬಾ ಇದೆ.




ಸ್ವಂತಿಕೆ ಮತ್ತು ಕ್ರಿಯಾಶೀಲತೆ ಬಳಸಿ ವಿಭಿನ್ನ ಶೈಲಿಯ ಹೊಸತನ ರೂಪಿಸಿದರೆ ಖಂಡಿತ ಈ ಕಲೆಯಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು.

ಶಿಲ್ಪವಿರಾಸತ್‌ನಲ್ಲಿ ಪಾಲ್ಗೊಳ್ಳಲು ಕರ್ನಾಟಕ ಮಾತ್ರವಲ್ಲದೇ ದೂರದ ಛತ್ತೀಸ್‌ಘರ್, ಕೇರಳದಿಂದಲೂ ಶಿಲ್ಪಿಗಳು ಬಂದಿರುವುದು ವಿಶೇಷ. ಒಟ್ಟು 31 ಶಿಲ್ಪಿಗಳು ಈ ಬಾರಿಯ ಶಿಲ್ಪವಿರಾಸತ್‌ನಲ್ಲಿ ಭಾಗವಹಿಸುತ್ತಿದ್ದಾರೆ.

ಕಾರ್ಯಕ್ರಮದಲ್ಲಿ ಶಿಲ್ಪ ವಿರಾಸತ್ ಸಲಹಾ ಸಮಿತಿ ಸದಸ್ಯರಾದ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಪುರುಷೋತ್ತಮ ಅಡ್ವೆ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ದೀಕ್ಷಾ ಗೌಡ ನಿರೂಪಿಸಿದರು.

- ಮೂಡುಬಿದಿರೆಯ ಆಳ್ವಾಸ್ ವಿರಾಸತ್ 2018ರ ಅಂಗವಾಗಿ ನಡೆಯುತ್ತಿರುವ ಆಳ್ವಾಸ್ ಶಿಲ್ಪ ವಿರಾಸತ್
- ಶಿಲ್ಪವಿರಾಸತ್‌ನಲ್ಲಿ ಪಾಲ್ಗೊಳ್ಳಲು ಕರ್ನಾಟಕ ಮಾತ್ರವಲ್ಲದೇ ತರ ರಾಜ್ಯಗಳಿಂದಲೂ ಶಿಲ್ಪಿಗಳ ಆಗಮನ
- ಛತ್ತೀಸ್‌ಘರ್, ಕೇರಳದಿಂದಲೂ ಮೂಡಬಿದಿರೆಗೆ ಬಂದಿರುವ ಶಿಲ್ಪಿಗಳು
- ಈ ಬಾರಿಯ ಶಿಲ್ಪವಿರಾಸತ್‌ನಲ್ಲಿ ಭಾಗವಹಿಸುತ್ತಿದ್ದಾರೆ ವಿವಿಧ ರಾಜ್ಯಗಳ ಒಟ್ಟು 31 ಶಿಲ್ಪಿಗಳು

### ಶಿಲ್ಪ ವಿರಾಸತ್ ವೈಶಿಷ್ಟ್ಯತೆ ಜನರಿಗೆ ತಲುಪುವ ಪ್ರಮುಖ ಮಾಧ್ಯಮ

ನಮ್ಮ ಸಂಸ್ಕೃತಿ, ಸಂಪ್ರದಾಯಗಳ ವೈಶಿಷ್ಟ್ಯತೆಗಳನ್ನು ಜನರಿಗೆ ತಲುಪಿಸುವ ಪ್ರಮುಖ ಮಾಧ್ಯಮಗಳೆಂದರೆ ಶಿಲ್ಪಕಲೆ. ಈ ಶಿಲ್ಪಕಲಾ ಕ್ಷೇತ್ರ ಬೆಳೆಯಬೇಕು ಇದರ ಪರಿಚಯ ಜನರಿಗಾಗಬೇಕು ಎಂಬ ಉದ್ದೇಶದಿಂದ ಆರಂಭವಾದದ್ದೇ ಶಿಲ್ಪ ವಿರಾಸತ್. ಶಿಲ್ಪವಿರಾಸತ್ ಹಾಗೂ ವರ್ಣ ವಿರಾಸತ್‌ನಲ್ಲಿ ತಯಾರಾದ ಕಲಾಕೃತಿಗಳನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಲ್ಲಿ ಸಂರಕ್ಷಿಸಿಡಲಾಗಿದೆ.

### ಆತ್ಮವಿಶ್ವಾಸ ಜೊತೆಗೆ ಸತತ ಪರಿಶ್ರಮ ಅಗತ್ಯ

ದೇವರು ದೇವಸ್ಥಾನಗಳಲ್ಲದೆ ಇನ್ನೂ ವಿಭಿನ್ನ ಶೈಲಿಯ ಶಿಲ್ಪಕಲೆಗಳಿವೆ. ಇದೆಲ್ಲವನ್ನೂ ಜನರಿಗೆ ಪರಿಚಯಿಸುವ ಪ್ರಯತ್ನವಾಗಬೇಕಿದೆ. ಶಿಲ್ಪಕಲೆ ಸಮರ್ಪಣಾ ಮನೋಭಾವ ಹಾಗೂ ನಿರಂತರ ಪರಿಶ್ರಮವನ್ನು ಬೇಡುವ ಕ್ಷೇತ್ರ. ಒಂದು ಶಿಲ್ಪವನ್ನು ಆರಂಭಿಸುವ ಮೊದಲು ಶಿಲ್ಪಿಯಲ್ಲೇ ದೃಢವಾದ ಆತ್ಮವಿಶ್ವಾಸ ಜೊತೆಗೆ ಸತತ ಪರಿಶ್ರಮವಿರಬೇಕು ಆಗ ಮಾತ್ರ ಶಿಲ್ಪಕ್ಕೆ ಒಂದು ಒಳ್ಳೆಯ ರೂಪ, ಬೆಲೆ ಬರಲು ಸಾಧ್ಯ.

■ ಸೂರಾಲು ವೆಂಕಟರಮಣ ಭಟ್, ಹಿರಿಯ ಶಿಲ್ಪಕರ್ಮಿ.

ಪ್ರಜಾವಾಣಿ

ಭಾನುವಾರ • ಡಿಸೆಂಬರ್ 23, 2018

# ಆಳ್ವಾಸ್ ಶಿಲ್ಪ ವಿರಾಸತ್ ಶಿಬಿರ ಆರಂಭ

ಮೂಡುಬಿದಿರೆ: 'ಶಿಲ್ಪಕಲೆಗೆ ನಿಷ್ಠೆ ಮತ್ತು ಶ್ರದ್ಧೆ ಬೇಕು. ಆಗ ಮಾತ್ರ ಕಲೆಗೆ ನಿಜವಾದ ಮಹತ್ವ ಸಿಗುತ್ತದೆ. ನಿರ್ದಿಷ್ಟ ಗುರಿ ಮತ್ತು ಸತತ ಪರಿಶ್ರಮದಿಂದ ಯಾರು ಬೇಕಾದರೂ ಸಾಧನೆ ಮಾಡಬಹುದು' ಎಂದು ಹಿರಿಯ ಚಿತ್ರಕಲಾವಿದ ವೆಂಕಟರಮಣ ಭಟ್ ಹೇಳಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ವಿದ್ಯಾಗಿರಿಯಲ್ಲಿ 16 ದಿನ ನಡೆಯುವಆಳ್ವಾಸ್‌ಶಿಲ್ಪವಿರಾಸತ್‌ರಾಷ್ಟ್ರೀಯ ಶಿಬಿರವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, 'ಈ ಶಿಬಿರ ಕೇವಲ ಶಿಬಿರಾರ್ಥಿಗಳಿಗೆ ಸೀಮಿತವಾಗಬಾರದು. ವಿದ್ಯಾರ್ಥಿಗಳು ಕೂಡ ಇದರ ಸದ್ಬಳಕೆ ಮಾಡಿಕೊಳ್ಳಬೇಕು' ಎಂದರು. ಶಿಬಿರದ ಸಲಹಾ ಸಮಿತಿಯ ಕೋಟಿಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಪುರುಷೋತ್ತಮ ಅಡ್ವೆ ಉಪಸ್ಥಿತರಿದ್ದರು. ದೀಕ್ಷಾ ಗೌಡ ನಿರೂಪಿಸಿದರು.




ಮೂಡುಬಿದಿರೆ ವಿದ್ಯಾಗಿರಿಯಲ್ಲಿ 16 ದಿನ ನಡೆಯುವ ಆಳ್ವಾಸ್ ಶಿಲ್ಪ ವಿರಾಸತ್ ಅನ್ನು ಹಿರಿಯ ಚಿತ್ರಕಲಾವಿದ ವೆಂಕಟರಮಣ ಭಟ್ ಶನಿವಾರ ಉದ್ಘಾಟಿಸಿದರು.

ವಿಜಯ ಕರ್ನಾಟಕ VK

ಭಾನುವಾರ,23 ಡಿಸೆಂಬರ್ 2018, ಮಂಗಳೂರು

### ರಾಷ್ಟ್ರಮಟ್ಟದ ಆಳ್ವಾಸ್ ಶಿಲ್ಪ ವಿರಾಸತ್-2019 ಉದ್ಘಾಟಿಸಿ ಸೂರಾಲು ವೆಂಕಟರಮಣ ಭಟ್

# ಹೊಯ್ಸಳ ಶಿಲ್ಪ ಶೈಲಿ ಪುನಶ್ಚೇತನಗೊಳಿಸಿ

**ವಿಕ ಸುದ್ದಿಲೋಕ** ಮೂಡುಬಿದಿರೆ

ಕರ್ನಾಟಕದಲ್ಲಿ ದೇವಾಲಯ ನಿರ್ಮಾಣ ಶಿಲ್ಪಿಗಳ ಕೊರತೆಯಿಂದಾಗಿ ಅನ್ಯ ರಾಜ್ಯಗಳ ಶಿಲ್ಪಿಗಳನ್ನು ಆಶ್ರಯಿಸಿರುವುದರಿಂದ ರಾಜ್ಯದಲ್ಲಿ ಬೇರೆ ರಾಜ್ಯಗಳ ಶೈಲಿಯ ದೇವಾಲಯಗಳು ನಿರ್ಮಾಣವಾಗುತ್ತಿವೆ. ನಾವು ನಮ್ಮ ಹೊಯ್ಸಳ ಶಿಲ್ಪ ಶೈಲಿಯನ್ನು ಪುನಶ್ಚೇತನಗೊಳಿಸಬೇಕು ಎಂದು ಹಿರಿಯ ಶಿಲ್ಪ ಕಲಾವಿದ ಸೂರಾಲು ವೆಂಕಟರಮಣ ಭಟ್ ಹೇಳಿದರು.

ಆಳ್ವಾಸ್ ವಿರಾಸತ್‌ಗೆ ಪೂರ್ವಭಾವಿಯಾಗಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವತಿಯಿಂದ ನಡೆಯುವ 15 ದಿನಗಳ ಆಳ್ವಾಸ್ ಶಿಲ್ಪ ವಿರಾಸತ್-2019ನ್ನು ಶನಿವಾರ ಉದ್ಘಾಟಿಸಿ ಮಾತನಾಡಿದರು.

ಶಿಲ್ಪ ಕಲೆಗೆ ಇಂದು ಜಾಗತಿಕವಾಗಿ ವಿಪುಲವಾದ ಬೇಡಿಕೆ ಇದೆ. ಕರಾವಳಿಯಲ್ಲಿ ಉತ್ತಮ ಶಿಲ್ಪಿಗಳಿದ್ದು, ಮತ್ತಷ್ಟು ಅಧ್ಯಯನ, ಪರಿಶ್ರಮ ಪಟ್ಟರೆ ಉನ್ನತ ಮಟ್ಟಕ್ಕೆ ಏರಬಹುದು. ಶಿಲ್ಪ ಕಲೆಯ ಬಗ್ಗೆ ಆಸಕ್ತಿ ಹೊಂದಿದವರು ಸಮಾಜದಲ್ಲಿ ಬಹಳಷ್ಟು ಜನರಿದ್ದಾರೆ. ಅವರ ಬೇಡಿಕೆಗಳಿಗೆ ತಕ್ಕಂತೆ ಶಿಲ್ಪ ರಚಿಸಿಕೊಡುವ ಶಿಲ್ಪಿಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ ಯುವಜನತೆ ಶಿಲ್ಪಕಲೆಯತ್ತ ಒಲವು ಗಳಿಸಿ ಸತತ ಪರಿಶ್ರಮ, ಸಾಹಸ ಪ್ರವೃತ್ತಿಯ ಮನೋಭಾವವನ್ನು ಬೆಳೆಸಿಕೊಂಡು ಉತ್ತಮ ಶಿಲ್ಪಿಗಳಾಗಿ ಬೆಳೆಯಬೇಕು ಎಂದು ಸಲಹೆ ನೀಡಿದರು.




ಆಳ್ವಾಸ್ ವಿರಾಸತ್‌ಗೆ ಪೂರ್ವಭಾವಿಯಾಗಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವತಿಯಿಂದ ನಡೆಯುವ 15 ದಿನಗಳ ಆಳ್ವಾಸ್ ಶಿಲ್ಪ ವಿರಾಸತ್-2019ನ್ನು ಹಿರಿಯ ಶಿಲ್ಪ ಕಲಾವಿದ ಸೂರಾಲು ವೆಂಕಟರಮಣ ಭಟ್ ಶನಿವಾರ ಉದ್ಘಾಟಿಸಿದರು.

ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ಬೇರೆ ಬೇರೆ ರಾಜ್ಯಗಳ ಶಿಲ್ಪ ಶೈಲಿ ವಿಭಿನ್ನವಾಗಿದ್ದು, ಅದನ್ನು ಪರಸ್ಪರ ಅರಿತುಕೊಳ್ಳಲು ಶಿಬಿರ ಸಹಕಾರಿಯಾಗಲಿದೆ. ಶಿಲ್ಪಿಗಳ ಬದುಕು ಸಾಧನೆಯ ದಾಖಲೀಕರಣವಾಗಬೇಕು. ಶಿಲ್ಪಕಲಾ ಚಟುವಟಿಕೆಗಳಿಗೆ ಸಂಸ್ಥೆಯು ನಿರಂತರ ಪ್ರೋತ್ಸಾಹ ನೀಡಲಿದೆ ಎಂದರು. ಇದೇ ಸಂದರ್ಭ ಭಾಗವಹಿಸಿದ ಶಿಲ್ಪಿಗಳನ್ನು ಗೌರವಿಸಲಾಯಿತು. ಶಿಲ್ಪಕಲಾ ಶಿಬಿರದ ಸಂಚಾಲಕರಾದ ಕೋಟೆ ಪ್ರಸಾದ್ ಆಳ್ವ, ಪುರುಷೋತ್ತಮ ಅಡ್ವೆ, ಗಣೇಶ್ ಸೋಮಯಾಜಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ದೀಕ್ಷಾ ಗೌಡ ಕಾರ್ಯಕ್ರಮ ನಿರ್ವಹಿಸಿದರು. ಕರ್ನಾಟಕ, ಛತ್ತೀಸ್‌ಗಢ ಸಹಿತ ಹಲವು ರಾಜ್ಯಗಳ ಮರ, ಲೋಹ, ಎರಕ ಮತ್ತು ಕಲ್ಲಿನ ಶಿಲ್ಪ ರಚನೆಯ 28 ಶಿಲ್ಪಿಗಳು ಶಿಬಿರದಲ್ಲಿ ಭಾಗವಹಿಸಿದ್ದಾರೆ.

VIJAYAVANI » MANGALURU

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಭಾನುವಾರ 23 ಡಿಸೆಂಬರ್ 2018 • 23 DECEMBER 2018

# ಆಳ್ವಾಸ್ ಶಿಲ್ಪ ವಿರಾಸತ್‌ಗೆ ಚಾಲನೆ

## ಡಿ.22ರಿಂದ ಜ.6ವರೆಗೆ ರಾಷ್ಟ್ರೀಯ ಶಿಲ್ಪ ಕಲಾ ಶಿಬಿರ




ವಿಜಯವಾಣಿ ಚಿತ್ರ

ಮೂಡುಬಿದಿರೆ ವಿದ್ಯಾಗಿರಿ ಕುವೆಂಪು ಸಭಾಂಗಣದಲ್ಲಿ ಆಳ್ವಾಸ್ ಶಿಲ್ಪ ವಿರಾಸತ್‌ಗೆ ವೆಂಕಟರಮಣ ಭಟ್ ಚಾಲನೆ ನೀಡಿದರು.

■ ವಿಜಯವಾಣಿ ಸುದ್ದಿಜಾಲ ಮೂಡುಬಿದಿರೆ

ಆಳ್ವಾಸ್ ವಿರಾಸತ್-2019ರ ಅಂಗವಾಗಿ ಡಿ.22ರಿಂದ ಜ.6ವರೆಗೆ ನಡೆಯಲಿರುವ ಆಳ್ವಾಸ್ ಶಿಲ್ಪ ವಿರಾಸತ್-2019, ರಾಷ್ಟ್ರೀಯ ಶಿಲ್ಪ ಕಲಾ ಶಿಬಿರಕ್ಕೆ ಶನಿವಾರ ವಿದ್ಯಾಗಿರಿ ಕುವೆಂಪು ಸಭಾಂಗಣದಲ್ಲಿ ಚಾಲನೆ ನೀಡಲಾಯಿತು.

ಶಿಲ್ಪ ಕಲಾವಿದ ವೆಂಕಟರಮಣ ಭಟ್ ಚಾಲನೆ ನೀಡಿ, ಕಲಾವಿದರಲ್ಲಿ ಬದ್ಧತೆಯಿದ್ದಲ್ಲಿ ಅವರಿಂದ ಅರಳುವ ಕಲೆಗೆ ಜನಮನ್ನಣೆ ಸಿಗುತ್ತದೆ. ಸಮರ್ಪಣೆ ಇದಲ್ಲಿ ಪ್ರತಿಯೊಬ್ಬ ಕಲಾವಿದನಿಂದ ಉತ್ತಮ ಶಿಲ್ಪಕಲೆ ಅರಳುತ್ತದೆ. ಕಲೆಗೆ ಹೆಚ್ಚಿನ ಪ್ರೋತ್ಸಾಹ ಸಿಗುವ ಕಾಲಘಟ್ಟದಲ್ಲಿ ಕಲಾವಿದರು ಕೂಡ ಕೌಶಲ ಅಭಿವೃದ್ಧಿಪಡಿಸಿದರೆ ಉತ್ತಮ ಎಂದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಅಧ್ಯಕ್ಷತೆ ವಹಿಸಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ದೇಶದ ವಿವಿಧ ಭಾಗದ ಕಲೆ, ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿದೆ. ಸಂಸ್ಥೆ ಅಧ್ಯಕ್ಷ ಡಾ.ಎಂ ಮೋಹನ ಆಳ್ವ ಅವರ ಪರಿಕಲ್ಪನೆಯಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ವಿದ್ಯಾರ್ಥಿಗಳು ಕಲಾ ಶಿಬಿರಗಳ ಮಹತ್ವ ಅರಿತು, ಕಲೆಯ ಪ್ರಭಾವವದಿಂದ ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು. ಶಿಬಿರ ಸಲಹಾ ಸಮಿತಿಯ ಕೋಟಿ ಪ್ರಸಾದ್ ಆಳ್ವ, ಗಣೇಶ್ ಸೋಮಯಾಜಿ, ಪುರುಷೋತ್ತಮ ಅಡ್ವೆ ಉಪಸ್ಥಿತರಿದ್ದರು. ದೀಕ್ಷಾ ಗೌಡ ಕಾರ್ಯಕ್ರಮ ನಿರೂಪಿಸಿದರು.

ವಿಜಯ ಕರ್ನಾಟಕ

ನಮ್ಮ ಕುಡ್ಲ

ಶನಿವಾರ,5 ಜನವರಿ 2019, ಮಂಗಳೂರು

# ಮೈದಳೆಯುತ್ತಿರುವ ಭಿನ್ನ ಕಲಾಕೃತಿಗಳು!

ಆಳ್ವಾಸ್ ಶಿಲ್ಪ ವಿರಾಸತ್

■ **ಬಿ. ಸೀತಾರಾಮ ಆಚಾರ್ಯ**, ಮೂಡುಬಿದಿರೆ

ಕಲ್ಲು, ಮಣ್ಣು, ಮರ ಮಾಧ್ಯಮಗಳಲ್ಲಿ ಅತ್ಯಪೂರ್ವ ಶಿಲ್ಪಕಲಾಕೃತಿಗಳಿಗೆ ಅಂತಿಮ ರೂಪ ಕೊಡುವ ಕೆಲಸದಲ್ಲಿ ನಿರತರಾಗಿದ್ದಾರೆ ಹತ್ತಾರು ಶಿಲ್ಪಿಗಳು.

ಮೂಡುಬಿದಿರೆಯಲ್ಲಿ ನಡೆಯುವ ಆಳ್ವಾಸ್ ವಿರಾಸತ್‌ಗೆ ಪೂರ್ವಭಾವಿಯಾಗಿ ಡಿ. 22 ರಿಂದ ಆರಂಭಗೊಂಡ ಈ ಶಿಲ್ಪ ಶಿಬಿರವು ಜ. 6 ರವರೆಗೆ ನಡೆಯಲಿದೆ. ಈ ಶಿಲ್ಪ ವಿರಾಸತ್‌ನಲ್ಲಿ ಕರ್ನಾಟಕ, ಕೇರಳ, ಛತ್ತೀಸ್‌ಗಢದಿಂದ ಬಂದಿರುವ 31 ಮಂದಿ ಸಮಕಾಲೀನ ಶಿಲ್ಪಿಗಳು ಸಾಂಪ್ರದಾಯಿಕ, ಬುಡಕಟ್ಟು ಮತ್ತು ನವ್ಯ ಶೈಲಿಯ ಶಿಲ್ಪ ಕಲಾಕೃತಿಗಳನ್ನು ವಿದ್ಯಾಗಿರಿಯ ಆಳ್ವಾಸ್ ಕ್ಯಾಂಪಸ್‌ನಲ್ಲಿ ರಚಿಸುತ್ತಿದ್ದು ಕ್ಯಾಂಪಸ್ ಪರಿಸರವೀಗ ಶಿಲ್ಪ ಶಾಲೆಯಾಗಿ ಪರಿವರ್ತನೆಗೊಂಡಿದೆ. ಇವರೊಂದಿಗೆ ಆಳ್ವಾಸ್‌ನ ಕಲಾ ವಿಭಾಗದ ಹೆಚ್ಚಿನ ವಿದ್ಯಾರ್ಥಿಗಳೂ ಶಿಲ್ಪಿಗಳಿಂದ ಮಾರ್ಗದರ್ಶನ ಪಡೆದು ಕಲಾಕೃತಿಗಳನ್ನು ರಚಿಸುವ ಮೂಲಕ ಪ್ರಾಯೋಗಿಕ ಅನುಭವವನ್ನು ಪಡೆಯುತ್ತಿದ್ದಾರೆ.

ಕಣ್ಮರೆಯಾಗುತ್ತಿರುವ ಸಾಂಪ್ರದಾಯಿಕ ಎರಕ ಶಿಲ್ಪವನ್ನು ಮಾಡುತ್ತಿರುವ ಬೆರಳೆಣಿಕೆಯ ಶಿಲ್ಪಿಗಳು ಉಡುಪಿ ಜಿಲ್ಲೆಯ ಶಂಕರಪುರದಲ್ಲಿದ್ದು ಆ ಪೈಕಿ ಜನಾರ್ದನ ಆಚಾರ್ಯ ಮತ್ತು ಅವರ ಮಕ್ಕಳು ಪ್ರಮುಖರು. ಅವರ ಪೈಕಿ ರತ್ನಾಕರ ಆಚಾರ್ಯ ಅವರು ಕ್ಯಾಂಪಸ್‌ನಲ್ಲಿಯೇ ಕುಲುಮೆಯನ್ನು ಸಿದ್ಧಗೊಳಿಸಿ ಹಳೆಯ ಪಂಚಲೋಹಗಳನ್ನು ಕರಗಿಸಿ ಕರಾವಳಿ ಪ್ರಮುಖ ದೈವಗಳಾದ ಧೂಮಾವತಿ, ಪಂಜುರ್ಲಿ, ಮೈಸಂದಾಯ ಮತ್ತಿತರ ದೈವಗಳ ಮುಖವಾಡಗಳನ್ನು ರಚಿಸಿದ್ದಾರೆ. ಅತ್ಯಂತ ಕಲಾತ್ಮಕವಾಗಿ ನೈಜವಾಗಿ ಮೂಡಿಬಂದಿವೆ ಈ ಕಲಾಕೃತಿಗಳು. ಹಿರಿಯ ಶಿಲ್ಪಿ ಸೂರಾಲು ವೆಂಕಟರಮಣ ಭಟ್ ಸಾಂಪ್ರದಾಯಿಕ ಶಿಲ್ಪಕಲಾಕೃತಿಯನ್ನು ರಚಿಸಿದ್ದರೆ ಉಡುಪಿಯ ಶ್ರುತಿನ್ ಶೆಟ್ಟಿಗಾರ್ ಅವರು ಕಲ್ಲಿನಲ್ಲಿ ಸಮಕಾಲೀನ ಪುರುಷ ಮಹಿಳೆಯರ ಸಂಯೋಜನೆಗೊಂಡ ನವ್ಯ ಶಿಲ್ಪಕಲಾಕೃತಿಯನ್ನು ರಚಿಸಿದ್ದಾರೆ.

ಛತ್ತೀಸ್‌ಗಢ ರಾಜ್ಯದ ಬಸ್ತಾರ್‌ನ ಲೋಹ ಶಿಲ್ಪಿಗಳಾದ ಬನ್ಸಿಲಾಲ್ ಬೈದ್, ಅಮಿರ್‌ನಾಗ್, ಬಾಲ ಮುಕುಂದ ನಾಗ್, ಸುಧೀರ್, ಜುಗಲ್ ಕಿರಣ್, ವಿನೋದ್ ಮತ್ತಿತರರು ಅಲ್ಲಿನ ಸಾಂಪ್ರದಾಯಿಕ ಬುಡಕಟ್ಟು ಶೈಲಿಯ ಕಲಾಕೃತಿಗಳನ್ನು ರಚಿಸುವಲ್ಲಿ ಮಗ್ನರಾಗಿದ್ದಾರೆ. ವಿಶೇಷವಾಗಿ ಕಾಡಿನೊಂದಿಗೆ ನಂಟು ಹೊಂದಿರುವ ಈ ಶಿಲ್ಪಕಲಾವಿದರು ಆನೆ, ಕುದುರೆ, ಹಸು ಅಂಬಾರಿ ಹೊತ್ತ ಆನೆ, ಹುಲಿ ಮತ್ತಿತರ ಪ್ರಾಣಿಗಳನ್ನು ಕೇಂದ್ರೀಕರಿಸಿಕೊಂಡು ಶಿಲ್ಪಕಲಾಕೃತಿಗಳನ್ನು ರಚಿಸುತ್ತಿದ್ದು ಅತ್ಯಂತ ಸೂಕ್ಷ್ಮ ಕುಸುರಿ ಕೆಲಸಗಳಿಂದ ಕೂಡಿವೆ. ಬೆಂಗಳೂರಿನ ಹಿರಿಯ ಶಿಲ್ಪಿ ರಾಮಮೂರ್ತಿ ಮತ್ತು ಅವರ ಆರು ಮಂದಿ ಶಿಷ್ಯಂದಿರು ಸುಮಾರು ಎರಡೂವರೆ ಅಡಿಯ ವಿವಿಧ ದೇವರ ಮೂರ್ತಿಗಳನ್ನು ರಚಿಸುತ್ತಿದ್ದಾರೆ. ರಾಮಮೂರ್ತಿಯವರು 'ನಾಗಕನ್ನಿಕೆ', ಶಿವಕುಮಾರ್ ಅವರು 'ಗರುಡವಾಹನ', ಮನ್ಮಥ ಆಚಾರ್ ಅವರು 'ಕೃಷ್ಣ ಪ್ರಶಾಂತ್ 'ಲಕ್ಷ್ಮೀ' ದೊಡ್ಡಾಚಾರ್ 'ಗಣಪತಿ', ಸಂದೀಪ್ ಆಚಾರ್ಯ, ಭರತ್ 'ಶಿವ' ಶಶಿಧರ ಆಚಾರ್ಯ 'ಬುದ್ಧ'ನ ಪ್ರತಿಮೆಗಳನ್ನು ರಚಿಸಿದ್ದಾರೆ. ಮೂರ್ತಿ ಶಿಲ್ಪಕ್ಕೆ ಹೆಸರುವಾಸಿಯಾದ ನುಣುಪಾದ ಬಿಳಿ ಬಣ್ಣದ ಶಿವನಿ ಮರವನ್ನು ಇದಕ್ಕೆ ಬಳಕೆ ಮಾಡಿರುವುದರಿಂದ ಈ ಕಲಾಕೃತಿಗಳು ಸಹಜ ಸೌಂದರ್ಯದಿಂದ ಕಣ್ಮನ ಸೆಳೆಯುತ್ತಿವೆ.

ಕುಂದಾಪುರದ ಕೃಷ್ಣಗುಡಿಗಾರ್ ನೇತೃತ್ವದ ಸತೀಶ್, ರತ್ನಾಕರ ಗುಡಿಗಾರ್, ಗಣೇಶ ಆಚಾರ್, ಶ್ರೀಕಾಂತ ಗುಡಿಗಾರ್, ಉಮೇಶ್ ಆಚಾರ್ಯ, ಸುಕುಮಾರ್ ಗುಡಿಗಾರ್, ಉದಯ ಆಚಾರ್ಯ ಅವರು ಗಟ್ಟಿ ಮತ್ತು ಬಾಳಿಕೆಗೆ ಹೆಸರುವಾಸಿಯಾದ ಹೆಬ್ಬಲಸು ಮರದಲ್ಲಿ ಸುಮಾರು ಆರು ಅಡಿ ಎತ್ತರದ ಜನಪದ ಶೈಲಿಯ ದ್ವಿಮುಖ ಬ್ರಹ್ಮ, ತ್ರಿಮುಖ ವರಾಹ ಹಾಗೂ ನಂದಿಗೋಣ ಕಲಾಕೃತಿಗಳನ್ನು ರಚಿಸಿದ್ದಾರೆ.

ಛತ್ತೀಸ್‌ಗಢದ ಬಿಕಸ್ ರಾಣಾ ನೇತೃತ್ವದ ಶಿಲ್ಪಿಗಳು ಟೆರ್‍ರಾಕೋಟಾ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಅಲಂಕೃತ ಆನೆ, ಕುದುರೆ, ಕಾದಾಡುವ ಗೂಳಿ... ಹೀಗೆ ಸಣ್ಣಗಾತ್ರದಿಂದ ದೊಡ್ಡ ಗಾತ್ರದ ಹಲವು ರೀತಿಯ ಕಲಾಕೃತಿಗಳು ಇಲ್ಲಿ ರೂಪ ಪಡೆಯುತ್ತಿವೆ.

ಪಶ್ಚಿಮ ಬಂಗಾಳದಲ್ಲಿ ಹುಟ್ಟಿ ಬೆಂಗಳೂರಲ್ಲಿ ನೆಲೆಸಿರುವ ಉಲ್ಲಾಸ್‌ಕಾರ್‌ಡೇ ಹಿರಿಯ ಶಿಲ್ಪ ಕಲಾವಿದರು. ಅವರು ಟೆರ್‍ರಾಕೋಟ ಮಾಧ್ಯಮದಲ್ಲಿ ಮುಖವಾಡಗಳು, ಗಣೇಶನ ಪ್ರತಿರೂಪ, ಗೊಂಬೆ, ಮಹಿಳೆ, ಹಾಗೂ ಕಲಾತ್ಮಕ ಟೈಲ್ಸ್ ಮಾದರಿಯ ಚಿತ್ರಗಳು ಹಾಗೂ ನವ್ಯ ಶೈಲಿಯ ಕಲಾಕೃತಿಗಳನ್ನು ರಚಿಸಿದ್ದಾರೆ.



> **ದೇಶದ ಭಿನ್ನ ಶಿಲ್ಪ ಮಾಧ್ಯಮದ ಕಲಾವಿದರು ಒಂದೇ ಕಡೆ ಸೇರಿ ಕಲಾಕೃತಿಗಳನ್ನು ರಚಿಸಲು ವೇದಿಕೆ ಒದಗಿಸಿರುವುದು ಉತ್ತಮ ಪ್ರಯತ್ನ. ಇದರಿಂದ ಶಿಲ್ಪಿಗಳಿಗೆ ಬೇರೆ ಬೇರೆ ಶಿಲ್ಪ ಪದ್ಧತಿಗಳನ್ನು ಅರಿಯಲು ಇದು ಪೂರಕವಾಗಿದೆ. ಇಲ್ಲಿ ಕಲಾ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸಿರುವುದರಿಂದ ಶಿಲ್ಪಿಗಳು ಬಳಸುವ ಟೂಲ್ಸ್‌ಗಳು, ರಚನೆಯ ವಿಧಾನವನ್ನು ಪ್ರತ್ಯಕ್ಷವಾಗಿ ಅರಿಯಲು ಸಹಕಾರಿ ಯಾಗಿದೆ. ಶಿಕ್ಷಣ ಸಂಸ್ಥೆಯೊಂದು ಶಿಲ್ಪಕಲೆಗೆ ಈ ರೀತಿಯ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಶಿಲ್ಪಿಗಳಿಗೆ ಅತ್ಯುತ್ತಮ ಸೌಲಭ್ಯಗಳನ್ನು ಒದಗಿಸಿದೆ.**
>
> **-ಉಲ್ಲಾಸ್‌ಕಾರ್‌ಡೇ,** ಟೆರ್‍ರಾಕೋಟ ಶಿಲ್ಪ ಕಲಾವಿದ.







> **ಈ ಹಿಂದೆಯೂ ಬೇರೆ ಶಿಲ್ಪ ಶಿಬಿರಗಳಲ್ಲಿ ಭಾಗವಹಿಸಿದ್ದೇನೆ. ನಮ್ಮ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡುವುದಕ್ಕೆ ಇಲ್ಲಿಗೂ ತುಂಬಾ ವ್ಯತ್ಯಾಸವಿದೆ. ಇಲ್ಲಿ ಬೇರೆ ಬೇರೆ ರೀತಿಯ ಶಿಲ್ಪಗಳು ರಚನೆಗೊಳ್ಳುತ್ತಿವೆ. ಅವುಗಳನ್ನು ತಿಳಿಯಲು ಸಹಕಾರಿಯಾಗಿದೆ.**
>
> **ರತ್ನಾಕರ ಆಚಾರ್ಯ**, ಶಂಕರಪುರ

ಪ್ರಜಾವಾಣಿ
ಭಾನುವಾರ • ಜನವರಿ 6, 2019

# ‘ಆಳ್ವಾಸ್ ವರ್ಣ ವಿರಾಸತ್’ ಕುಂಚದಲ್ಲಿನ ಬಣ್ಣಗಳ ಮೆರುಗು

